# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 22–11–2012 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಮುನೀಂದ್ರಕುಮಾರ್.ಕೆ.ಎ – ಅಧ್ಯಕ್ಷರು | **ಕೌನ್ಸಿಲ್ ಕಾರ್ಯದರ್ಶಿ,** |
| ತೇಜಸ್ವಿನಿ ಎನ್.ರಾಜು – ಸದಸ್ಯರು | **ಉಪ ಆಯುಕ್ತರು (ಆಸ್ತಿಗಳು),** |
| ಸುರೇಶ್. ಹೆಚ್ – ಸದಸ್ಯರು | **ಸಹಾಯಕ ಕಾನೂನು ಅಧಿಕಾರಿ,** |
| ಮುನಿಸ್ವಾಮಿಗೌಡ – ಸದಸ್ಯರು | **ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ),** |
| ಆನಂದ್. ವಿ – ಸದಸ್ಯರು | **ಸಹಾಯ ಕಂದಾಯ ಅಧಿಕಾರಿ (ಬಸವನಗುಡಿ),** |
| ಕೆ. ಉಮೇಶ್‌ಶೆಟ್ಟಿ – ಸದಸ್ಯರು | **ಸಹಾಯಕ ಕಾರ್ಯಪಲಕ ಅಭಿಯಂತರರು (ಕೆಂಗೇರಿ),** |
| ಗಂಗಾಂಬಿಕೆ – ಸದಸ್ಯರು | --- |
| ನೂರ್ ಜಹಾನ್ – ಸದಸ್ಯರು | --- |
| ಟಿ.ಎ. ಗಾಯಿತ್ರಿ – ಸದಸ್ಯರು | --- |
| **ಗೈರು ಹಾಜರಿದ್ದ ಸದಸ್ಯರುಗಳು** | --- |
| ಕೆ. ಪೂರ್ಣಿಮ – ಸದಸ್ಯರು | --- |
| ಕ್ವೀನ್‌ಎಲಿಜ಼ೆಬತ್ – ಸದಸ್ಯರು | --- |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## ***01] ವಿಷಯದ ಸಂಖ್ಯೆ :–ತೆಆಸ್ಥಾಸ/109/2012–13***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ :ಎ3(2)/ಪಿಆರ್/04/02–13, ದಿನಾಂಕ : 23.08.2012 ರಲ್ಲಿ ವಿವರಿಸಿರುವಂತೆ, ಶ್ರೀ.ಕೆ.ಚೋಳನ್ ರವರ ಪತ್ನಿ ಶ್ರೀಮತಿ.ರುಕ್ಮಿಣಿ ರವರು ತಮ್ಮ ಮನವಿಯಲ್ಲಿ ಕ್ರಯಕ್ಕೆ ನೀಡುವ ಬಗ್ಗೆ ಕೋರಿರುತ್ತಾರೆ. ಇದೇ ರೀತಿ ವಾರ್ಡ್ ಸಂಖ್ಯೆ 81ರಲ್ಲಿ ಇದ್ದಂತಹ ವಸತಿ ಗೃಹಗಳನ್ನು ಹಾಲಿ ವಾಸಿಸುತ್ತಿದ್ದವರಿಗೆ ಮಾರಾಟ ಮಾಡುವ ನಿರ್ಣಯ ಕೈಗೊಂಡಿದೆ ಎಂದು ಅದೇ ರೀತಿ ನನಗೂ ಸಹ ಈ ವಸತಿಗೃಹ ಮಾರಾಟ ಮಾಡಲು ಕೋರಿ ಅನೇಕ ಮನವಿಗಳನ್ನು ಹಿಂದಿನಿಂದಲೂ ನೀಡುತ್ತಾ ಬಂದಿರುತ್ತಾರೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಹಿಂದೆ ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಮಹಾನಗರ ಪಾಲಿಕೆಯ ಸಭೆಯ ಮುಂದೆ ಈ ವಿಷಯ ಚರ್ಚಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸರ್ಕಾರವು ತನ್ನ ಆದೇಶದ ಸಂಖ್ಯೆ:ನಅಇ/279/ಎಂಎನ್‌ಜಿ/03, ದಿನಾಂಕ : 25–10–2005ರಂತೆ ಮಹಾನಗರ ಪಾಲಿಕೆಯ ದಿನಾಂಕ:27–07–2003ರ ಸಮಿತಿಯ ವಿಷಯದ ಸಂಖ್ಯೆ:10(284)ರ ನಿರ್ಣಯವನ್ನು ರದ್ದುಪಡಿಸಿದೆ. ಈಗ ಹಾಲಿ ಕೆಳಕಂಡ ಮಹಾನಗರ ಪಾಲಿಕೆ ಸದಸ್ಯರುಗಳು/ಸಚಿವರುಗಳು ಇವರಿಗೆ ವಸತಿ ಗೃಹ ಕ್ರಯಕ್ಕೆ ನೀಡುವ ಬಗ್ಗೆ ಶಿಫಾರಸ್ಸು ಮಾಡಿರುತ್ತಾರೆ.

1. ಶ್ರೀ.ಎಸ್.ಕೆ.ನಟರಾಜ್, ಹಿಂದಿನ ಮಹಾಪೌರರು
2. ಶ್ರೀ.ಎಂ.ಕೆ.ಗುಣಶೇಖರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 63, ಜಯಮಹಲ್
3. ಶ್ರೀ ಉದಯಕುಮಾರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 90, ಹಲಸೂರು.
4. ಶ್ರೀ ಆರ್.ಸಂಪತ್‌ರಾಜ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 47 ದೇವರಜೀವನಹಳ್ಳಿ
5. ಶ್ರೀ.ಕಟ್ಟಾಸುಬ್ರಮಣ್ಯ ನಾಯ್ಡು, ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಸಚಿವರು.
6. ಶ್ರೀ.ಲಕ್ಷ್ಮೀನಾರಾಯಣ, ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳು

ಉಪ ಆಯುಕ್ತರು (ಆಸ್ತಿಗಳು) ರವರು ದಿನಾಂಕ:27-12-2011ರಂದು ಒಂದು ಅಂತರಿಕ ಕಛೇರಿ ಟಿಪ್ಪಣಿ ಕಳುಹಿಸಿ ಶ್ರೀ.ಎಂ.ಉದಯಶಂಕರ್, ವಿರೋಧ ಪಕ್ಷದ ನಾಯಕರು ರವರ ಪತ್ರವನ್ನು ಆಧರಿಸಿ ಇವರಿಗೆ ಅನುಕಂಪದ ಆಧಾರದ ಮೇಲೆ ಕ್ರಯಕ್ಕೆ ಮಂಜೂರು ಮಾಡುವ ಸಂಬಂಧ ಪಾಲಿಕೆ ಸಭೆಯ ಮುಂದೆ ಪ್ರಸ್ತಾವನೆಯನ್ನು ಮರು ಮಂಡಿಸಲು ಕೋರಿರುತ್ತಾರೆ. ಈಗ ಈ ವಸತಿ ಗೃಹವನ್ನು ಕ್ರಯಕ್ಕೆ ನೀಡುವ ಬಗ್ಗೆ ಪರಿಶೀಲಿಸಿ ಮತ್ತೊಮ್ಮೆ ತೀರ್ಮಾನ ತೆಗೆದುಕೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲಾಗಿದ್ದು, ಸಮಿತಿಯು ಪ್ರಸ್ತಾವನೆ ಪರಿಶೀಲಿಸಿ ಮಾಜಿ ನಗರಸಭಾ ಸದಸ್ಯರಾದ ದಿ॥ ಕೆ. ಚೋಳನ್ ರವರ ಪತ್ನಿ ಶ್ರೀಮತಿ. ರುಕ್ಮಿಣಿ ರವರಿಗೆ ಸದರಿ ವಸತಿ ಗೃಹವನ್ನು ಕ್ರಯಕ್ಕೆ ನೀಡಲು ಸಮಿತಿಯು ತೀರ್ಮಾನಿಸಿ ಮುಂದಿನ ನಿರ್ಣಯಕ್ಕೆ ಪಾಲಿಕೆ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿರುತ್ತದೆ. ದಿ:29-05-2012 ರಂದು ಪಾಲಿಕೆ ಸಭೆಯಲ್ಲಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಿರುತ್ತದೆ. ಆದರೆ ವಸತಿ ಗೃಹವನ್ನು ಕ್ರಯಕ್ಕೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ:** **ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ : 23.08.2012ರ ಟಿಪ್ಪಣಿಯಲ್ಲಿನ ವಿಷಯದ ಬಗ್ಗೆ ಚರ್ಚಿಸಲಾಯಿತು. ಅರ್ಜಿದಾರರು ಹಿಂದಿನಿಂದಲೂ ಅನೇಕ ಮನವಿಗಳನ್ನು ನೀಡುತ್ತಾ ಬಂದಿದ್ದು, ವಾರ್ಡ್ 81ರಲ್ಲಿ ಇದ್ದಂತಹ ವಸತಿ ಗೃಹಗಳನ್ನು ಹಾಲಿ ವಾಸಿಸುತ್ತಿದ್ದವರಿಗೆ ಕ್ರಯಕ್ಕೆ ನೀಡಿರುವ ರೀತಿಯಲ್ಲಿ ತಮಗೂ ನೀಡಬೇಕೆಂದು ಕೋರಿರುತ್ತಾರೆ. ಅರ್ಜಿದಾರರು 40 ವರ್ಷಗಳಿಂದಲೂ ವಾಸಿಸುತ್ತಾ ಬಂದಿದ್ದು, ಪರಿಶಿಷ್ಠ ಜಾತಿಗೆ ಸೇರಿದವರಾಗಿದ್ದು, ಈ ಹಿಂದೆ ಇದೇ ಪ್ರದೇಶದಲ್ಲಿನ ವಸತಿಗೃಹಗಳನ್ನು ಹಾಲಿ ವಾಸವಿದ್ದವರಿಗೆ ಕ್ರಯಕ್ಕೆ ನೀಡಿರುವ ಮಾದರಿಯಲ್ಲಿಯೇ ಅಥವಾ ಪಂಕ್ತಿ ಸಂಖ್ಯೆ 19 ಮತ್ತು 20ರಲ್ಲಿ ವಿವರಿಸಿರುವಂತೆ 2001ರ ಮಾರ್ಗಸೂಚಿ ದರದನ್ವಯ ನಿವೇಶನದ ವಿಸ್ತೀರ್ಣಕ್ಕೆ ಚದರಡಿ ಒಂದಕ್ಕೆ ರೂ400/- ರಂತೆ ಹಾಗೂ ಕಟ್ಟಡಕ್ಕೆ ಚದರ ಒಂದಕ್ಕೆ ರೂ.50,000/- ಗಳಂತೆ ಕ್ರಯಕ್ಕೆ ನೀಡುವ ಬಗ್ಗೆ ಪಾಲಿಕೆ ಸಭೆಯ ಮುಂದೆ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *02] ವಿಷಯದ ಸಂಖ್ಯೆ :-ತೆಆಸ್ಥಾಸ/112/2012-13*

ವಿಶೇಷ ಆಯುಕ್ತರ (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/80/12-13, ದಿನಾಂಕ: 14-06-2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 6, ಮಲ್ಲೇಶ್ವರಂ, 1ನೇ ಮುಖ್ಯರಸ್ತೆಯ ಸ್ವತ್ತಿನ ಸಂಖ್ಯೆ 44ರ ಪಕ್ಕದಲ್ಲಿರುವ ಸ್ವತ್ತಿನ ವಿಸ್ತೀರ್ಣವು 30*13+27/2 ಅಡಿಗಳ ಸ್ವತ್ತನ್ನು ಶ್ರೀ.ಕೆ.ರಾಮರಾಜ್ ರವರು 1968 ರಲ್ಲಿ ಕ್ರಯಕ್ಕೆ ಪಡೆದಿದ್ದು, ಸದರಿಯವರು ನಿಧನ ಹೊಂದಿದ್ದು, ಅವರ ಅವಲಂಬಿತದಾರರು ಸದರಿ ಸ್ವತ್ತಿಗೆ ಕ್ರಯಪತ್ರ ನೀಡಲು ಕೋರಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಮುಂದೆ ದಿ: 26-10-2010ರಂದು ಸಭೆಯಲ್ಲಿ ಅರ್ಜಿದಾರರು ಕೋರಿರುವ ಜಾಗವನ್ನು ಮಾರುಕಟ್ಟೆ ದರವನ್ನು ವಸೂಲಿ ಮಾಡಿಕೊಂಡು ಕ್ರಯಪತ್ರ ನೀಡಲು ನಿರ್ಧರಿಸಿರುತ್ತದೆ. ಇದಕ್ಕೆ ಪೂರವಾಗಿ ದಿನಾಂಕ: 27-12-2011 ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಸರ್ಕಾರದ ಪತ್ರ ಸಂಖ್ಯೆ ನಅಇ 143 ಎಂಎನ್‌ಜಿ 2012 ದಿನಾಂಕ 23-05-2012ರ ಪತ್ರದಲ್ಲಿ ಶ್ರೀ. ನಾಗರಾಜ್ ಇವರಿಗೆ ಕ್ರಯಕ್ಕೆ ನೀಡಬೇಕಾದಲ್ಲಿ ಸರ್ಕಾರದ ಈಗಿನ ಮಾರುಕಟ್ಟೆ ದರವನ್ನು ನಿಧಿಪಡಿಸಿ ಪ್ರಸ್ತುತ ಅಸ್ತಿತ್ವದಲ್ಲಿರುವ ಪಾಲಿಕೆಯ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆದು ನಂತರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿವಿಸಿ-19/2010-11, ದಿ: 21-09-2011 ರಂತೆ ಸ್ಥಿರಾಸ್ತಿಗಳ ಮತ್ತು ಕಟ್ಟಡದ ಅಂದಾಜು ಮಾರುಕಟ್ಟೆ ದರದಂತೆ ಪ್ರಸ್ತುತ ಪ್ರದೇಶದಲ್ಲಿ ಚದರ ಅಡಿ ಒಂದಕ್ಕೆ ರೂ. 4000/- ಇದ್ದು, ಇದಕ್ಕೆ, ಶೇ 20% ರಷ್ಟು (ವಾಣಿಜ್ಯ ಉದ್ದೇಶಕ್ಕೆ) ಹೆಚ್ಚಿಸಿದಾಗ ಒಟ್ಟು ಮೊತ್ತ ಚದರ ಅಡಿ 1ಕ್ಕೆ ರೂ.

4000+800=4800/- ಆಗುತ್ತದೆ. ಇದರಂತೆ ಸ್ವತ್ತಿನ ಮೌಲ್ಯ 30*13+27/2=600 ಚದರ ಅಡಿ ರೂ. 28,80000/- ಆಗುತ್ತದೆ.
ಈ ಮೇಲಿನ ಹಿನ್ನೆಯಲ್ಲಿ ಶ್ರೀ. ನಾಗರಾಜ್ ರವರಿಗೆ ಕ್ರಯಕ್ಕೆ ನೀಡುವ ಜಾಗದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಸೂಕ್ತ ತೀರ್ಮಾನ ಕೋರಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ವಿಶೇಷ ಆಯುಕ್ತರ ದಿನಾಂಕ: 14-06-2012ರ ಟಿಪ್ಪಣಿಯನ್ನು ಪರಿಶೀಲಿಸಿ, ಶ್ರೀ ನಾಗರಾಜ್ ರವರಿಂದ ಬರಬೇಕಾದ ಬಾಕಿ ಕಂದಾಯವನ್ನು ಪಾವತಿಸಿಕೊಂಡ ನಂತರ ಸದರಿಯವರಿಗೆ ಸ್ವತ್ತನ್ನು ಕ್ರಯಕ್ಕೆ ನೀಡುವ ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11-09-2012ರ ನಿರ್ಣಯ.

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ॥11.09.12ರ ಸಭೆಯ ನಿರ್ಣಯವನ್ನು ಒಪ್ಪಲು ತೀರ್ಮಾನಿಸಲಾಯಿತು.**

## *03] ವಿಷಯದ ಸಂಖ್ಯೆ :-ತೆಆಸ್ಥಾಸ/113/2012-13*

ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 11.07.2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹ ಕಂದಾಯ ಅಧಿಕಾರಿ ಗಾಂಧಿನಗರ ಉಪವಿಭಾಗದ ವಾರ್ಡ್ 94, ಗಾಂಧಿನಗರ, 6ನೇ ಮುಖ್ಯರಸ್ತೆ, ಮೈಸೂರ್ ಬಜಾರ್ ಪಕ್ಕದಲ್ಲಿನ 4x4 ಅಡಿಗಳ ಜಾಗವನ್ನು ಶ್ರೀ. ಅಬ್ದುಲ್ ಬಷೀರ್ (ಅಂಗವಿಕಲರು) ರವರಿಗೆ ಪೆಟ್ಟಿಗೆ ಅಂಗಡಿ ನಡೆಸಲು ದಿನಾಂಕ: 26.04.2007 ರಿಂದ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿ ರೂ. 262/- ಮಾಸಿಕ ಬಾಡಿಗೆ ನಿಗಧಿಪಡಿಸಲಾಗಿದ್ದು, ಅದರಂತೆ ಗುತ್ತಿಗೆದಾರರು ಏಪ್ರೀಲ್-2012 ರವರೆಗೆ ಬಾಡಿಗೆ ಮೊತ್ತವನ್ನು ಪಾವತಿಸಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ: 25.04.2012ಕ್ಕೆ ಮುಗಿದಿರುವ ಹಿನ್ನೆಲೆಯಲ್ಲಿ ಮತ್ತೆ 5 ವರ್ಷಗಳ ಅವಧಿಗೆ ಗುತ್ತಿಗೆ ಕರಾರು ಪತ್ರ ನವೀಕರಣಕ್ಕಾಗಿ ಅರ್ಜಿ ಮುಖೇನ ಕೋರಿರುತ್ತಾರೆ.
ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಿರ್ದೇಶಕರು ವಿಕಲ ಚೇತನರ ಹಾಗೂ ಹಿರಿಯ ನಾಗರೀಕರ ಸಭಲೀಕರಣ ನಿರ್ದೇಶನಾಲಯ ಕಛೇರಿ, ಕರ್ನಾಟಕ ಸರ್ಕಾರ ರವರು ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಪತ್ರ ಬರೆದು ಅರ್ಜಿದಾರರು ಅಂಗವಿಕಲರಾಗಿರುವುದಿರಿಂದ ಅವರ ಜೀವನೋಪಾಯಕ್ಕಾಗಿ ಅವರಿಗೆ ಹಾಲಿ ನೀಡಿರುವ ಗುತ್ತಿಗೆ ಜಾಗವನ್ನು ನವೀಕರಿಸಲು ಶೀಫಾರಸ್ಸು ಮಾಡಿರುತ್ತಾರೆ.
ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆದರವು ಸರ್ಕಾರದ ಮಾರ್ಗಸೂಚಿಯ ದಿನಾಂಕ: 17.04.2007ರಂತೆ ವಾಣಿಜ್ಯಕ್ಕೆ ಚದರ ಅಡಿ ಒಂದಕ್ಕೆ ರೂ. 5000/- ಗಳಾಗಿದ್ದು, ಇದಕ್ಕೆ ಶೇ: 40ರಷ್ಟು ಹೆಚ್ಚಿಸಿದಾಗ 5000+2000=7000/- ಗಳಾಗಿದ್ದು, ಅರ್ಜಿದಾರರಿಗೆ ನೀಡಲು ಉದ್ದೇಶೀಸಿರುವ ಸ್ವತ್ತಿನ ಅಳತೆ 4x4=16 ಚದರ ಅಡಿಗಳಾಗಿದ್ದು, ಅಡಿ ಒಂದಕ್ಕೆ 7000x16=1,12,000/- ರೂ. ಗಳಾಗುತ್ತದೆ. ಶೇ.10% ರಂತೆ ಪರಿಗಣಿಸಲಾಗಿ ವಾರ್ಷಿಕ ಗುತ್ತಿಗೆ ಹಣವು 11,200/- ರೂ.ಗಳಾಗುತ್ತದೆ. ಅಂದರೆ ಮಾಸಿಕ ಗುತ್ತಿಗೆ ಹಣವು ರೂ. 933/- ಗಳಾಗುತ್ತದೆ, ಅರ್ಜಿದಾರರು ಅಂಗವಿಕಲರಾಗಿರುವುದರಿಂದ ಶೇ.50%ರಷ್ಟು ರಿಯಾಯತಿ ನೀಡಿದಲ್ಲಿ ಮಾಸಿಕ ಗುತ್ತಿಗೆ ಮೊತ್ತ 467/- ರೂ. ಗಳಾಗುತ್ತದೆ.
ಈ ಮೇಲ್ಕಂಡ ಎಲ್ಲಾ ವಿಷಯವನ್ನು ಅವಗಾಹನೆಗೆ ತರುತ್ತಾ, ತೆರಿಗೆ ಮತ್ತು ಆಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 11-07-2012ರ ಟಿಪ್ಪಣಿಯನ್ನು ಪರಿಶೀಲಿಸಿ, ಪಾದಚಾರಿಗಳಿಗೆ ಹಾಗೂ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗದಂತೆ ಷರತ್ತು ವಿಧಿಸಿ ಸದರಿ ಶ್ರೀ ಅಬ್ದುಲ್ ಬಷೀರ್ (ಅಂಗವಿಕಲರು) ರವರಿಗೆ ನೀಡಿರುವ ಗುತ್ತಿಗೆ ಅವಧಿಯನ್ನು 5 ವರ್ಷಗಳ ಅವಧಿಗೆ ನವೀಕರಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11-09-2012ರ ನಿರ್ಣಯ.

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ॥11.09.12ರ ಸಭೆಯ ನಡವಳಿಗಳನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *04] ವಿಷಯದ ಸಂಖ್ಯೆ :-ತೆಆಸ್ಥಾಸ/116/2012-13*

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಬಿಬಿಎಂಪಿ/ಸ.ಕಾ.ಅ(ಯ.ವ)(ವಿ.ಪುರ)ಪಿಆರ್/99/ 12-13, ದಿನಾಂಕ : 12.10.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಂಟಿ ಆಯುಕ್ತರು (ಯಲಹಂಕ) ವಲಯ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.9 (ವಿದ್ಯಾರಣ್ಯಪುರ) ವ್ಯಾಪ್ತಿಯಲ್ಲಿ ಬಹುತೇಕ ಪ್ರದೇಶಗಳು ಗ್ರಾಮಾಂತರ ಪ್ರದೇಶಗಳಿಂದ ಸೇರ್ಪಡೆಯಾದ ಪ್ರದೇಶಗಳಾಗಿದ್ದು, ಸದರಿ ಪ್ರದೇಶಗಳಲ್ಲಿ ದಿನೇ ದಿನೇ ಜನವಸತಿಗಳು ಹೆಚ್ಚಾಗುತ್ತಿದ್ದು, ಗಣನೀಯವಾಗಿ ಜನಸಂಖ್ಯೆ ಸಹ ಅಧಿಕವಾಗುತ್ತಿರವುದು ವಾಸ್ತುವಾಂಶವಾಗಿರುತ್ತದೆ.

ಈ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಕೊಳವೆ ಬಾವಿಗಳು ಜಲ ಮೂಲವಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಅಂತರ್ ಜಲ ಮಟ್ಟ ಕಡಿಮೆಯಾಗಿ ಹಾಲಿ ಇರುವ ಕೊಳವೆ ಬಾವಿಗಳಲ್ಲಿ ನೀರಿನ ಇಳುವರಿ ಕಡಿಮೆಯಾಗಿದ್ದು ನೀರು ಬತ್ತಿಹೋಗಿದ್ದು ಯೋಜನೆಗಳು ವಿಫಲವಾಗುತ್ತಿರುವುದರಿಂದ ಕುಡಿಯುವ ನೀರಿಗೆ ತೀರ ಆಹಾಕಾರವಾಗಿರುತ್ತದೆ.

ವಾರ್ಡ್ ವ್ಯಾಪ್ತಿಯ ಪರಿವೀಕ್ಷಣೆ ಸಮಯದಲ್ಲಿ ಖುದ್ದಾಗಿ ಕಂಡು ಬಂದಂತಹ ಹಾಗೂ ಸಾರ್ವಜನಿಕರು ನೀಡಿರುವ ಅಹವಾಲುಗಳು ಪರಿಶೀಲಿಸಲಾಗಿರುತ್ತದೆ. ಮಾನ್ಯ ಸದಸ್ಯರು ಈ ಕೆಳಕಂಡ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬವಣೆಯನ್ನು ನಿವಾರಿಸಲು ತುರ್ತು ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ.

ಕೊಳವೆ ಬಾವಿ ಕೊರೆಯಿಸಬೇಕಾದ ಸ್ಥಳಗಳು :

1. ವಾರ್ಡ್ ನಂ.9ರ ಎ.ಪಿ.ಸಿ ಬಡಾವಣೆಯಲ್ಲಿ ಕೊಳವೆ ಕೊರೆಯಿಸಿ ಪಂಪು ಮೋಟಾರ್ ಅಳವಡಿಸಿ ನೀರು ಪೂರೈಕೆ ಮಾಡುವುದು.
2. ವಾರ್ಡ್ ನಂ.9ರ ವೆಂಕಟಸ್ವಾಮಪ್ಪ ಬಡಾವಣೆಯಲ್ಲಿ ಕೊಳವೆ ಕೊರೆಯಿಸಿ ಪಂಪು ಮೋಟಾರ್ ಅಳವಡಿಸಿ ನೀರು ಪೂರೈಕೆ ಮಾಡುವುದು.
3. ವಾರ್ಡ್ ನಂ.9ರ ದುರ್ಗಾ ಬಡಾವಣೆಯಲ್ಲಿ ಕೊಳವೆ ಕೊರೆಯಿಸಿ ಪಂಪು ಮೋಟಾರ್ ಅಳವಡಿಸಿ ನೀರು ಪೂರೈಕೆ ಮಾಡುವುದು.
4. ವಾರ್ಡ್ ನಂ.9ರ ಬಿ.ಇ.ಎಲ್ ಬಡಾವಣೆಯಲ್ಲಿ ಕೊಳವೆ ಕೊರೆಯಿಸಿ ಪಂಪು ಮೋಟಾರ್ ಅಳವಡಿಸಿ ನೀರು ಪೂರೈಕೆ ಮಾಡುವುದು.
5. ವಾರ್ಡ್ ನಂ.9ರ ಸಪ್ತಗಿರಿ ಬಡಾವಣೆಯಲ್ಲಿ ಕೊಳವೆ ಕೊರೆಯಿಸಿ ಪಂಪು ಮೋಟಾರ್ ಅಳವಡಿಸಿ ನೀರು ಪೂರೈಕೆ ಮಾಡುವುದು.
6. ವಾರ್ಡ್ ನಂ.9ರ ಆಂಜನೇಯ ಬಡಾವಣೆಯಲ್ಲಿ ಕೊಳವೆ ಕೊರೆಯಿಸಿ ಪಂಪು ಮೋಟಾರ್ ಅಳವಡಿಸಿ ನೀರು ಪೂರೈಕೆ ಮಾಡುವುದು.

ಮೇಲಿನ 6 ಪ್ರದೇಶಗಳಲ್ಲಿ ಕೊಳವೆ ಬಾವಿ ಕೊರೆಯಿಸಿ ವಿದ್ಯಧೀಕರಣಗೊಳಿಸಲು ಒಟ್ಟುಮೊತ್ತ ಸುಮಾರು 30ಲಕ್ಷ ರೂಗಳು ಹೆಚ್ಚುವರಿ ಅನುದಾನ ಅಗತ್ಯವಿದ್ದು ಸದರಿ ಮೊತ್ತವನ್ನು ಬಿಡುಗಡೆ ಮಾಡಲು ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಅಪರ ಆಯುಕ್ತರು (ಯೋಜನೆ) ರವರ ದಿ॥12.10.12ರ ಟಿಪ್ಪಣಿಯನ್ನು ಒಪ್ಪಲಾಯಿತು.**

## *05] ವಿಷಯದ ಸಂಖ್ಯೆ :-ತೆಆಸ್ಥಾಸ/117/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಮುಲೆಅ/ಆಯವ್ಯಯ/ಪಿಆರ್/2899/12-13, ದಿನಾಂಕ : 11.10.2012 ರಲ್ಲಿ ವಿವರಿಸಿರುವಂತೆ, ಎಂ.ವಿ.ಗಾರ್ಡನ್, ವಾರ್ಡ್ ಸಂಖ್ಯೆ : 90ರಲ್ಲಿರುವ ಡೋಬಿಘಾಟ್‌ನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಯ ಅಂದಾಜು ಮೊತ್ತ ರೂ.115.00 ಲಕ್ಷಗಳಿಗೆ ಅನುಮೋದನೆ ನೀಡಲು ಪ್ರಸ್ತಾವನೆ ಸಲ್ಲಿಸಲಾಗಿದೆ.

ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸುವ ಅವಶ್ಯವಿರುವುದರಿಂದ 2012–13ನೇ ಸಾಲಿನ ಆಯವ್ಯಯದಲ್ಲಿ ಅವಕಾಶ ಕಲ್ಪಿಸುವ ಬಗ್ಗೆ ಕಾಮಗಾರಿಯ ಮೊತ್ತ ರೂ.115.00 ಲಕ್ಷಗಳನ್ನು ನಿಗಧಿಪಡಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ ಸಂಖ್ಯೆ : ಮುಲೆಅ/ಆಯವ್ಯಯ/ಪಿಆರ್/2899/2012–13, ರಂತೆ ಪತ್ರ ದಿನಾಂಕ : 15.06.2012 ರಂದು ಟಿಪ್ಪಣಿಯನ್ನು ಮಂಡಿಸಲಾಗಿತ್ತು. ಆದರೆ ಈ ಬಗ್ಗೆ ಯಾವುದೇ ವಿಧವಾದ ತೀರ್ಮಾನವನ್ನು ಕೈಗೊಳ್ಳದಿರುವ ಸಂಬಂಧದಲ್ಲಿ ದಿನಾಂಕ : 17.09.2012ರಂದು ಮಾನ್ಯ ಆಯುಕ್ತರವರೊಂದಿಗೆ ಚರ್ಚಿಸಿದಂತೆ ಮಾನ್ಯ ಆಯುಕ್ತರ ದಿನಾಂಕ : 03.10.2012ರ ಅನುಮೋದನೆಯಲ್ಲಿ ಕೈಗೊಂಡ ತೀರ್ಮಾನದಂತೆ ಮೇಲ್ಕಂಡ ಕಾಮಗಾರಿಯನ್ನು 2012–13ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀಷಿಕೆ ಪಿ–1806 ಅಡಿ (POW) ಕಾಮಗಾರಿ ಕಾರ್ಯಕ್ರಮ ಪಟ್ಟಿಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ವಿಶೇಷ ಆಯುಕ್ತರು (ಯೋಜನೆ) ರವರ ದಿ||.11.10.2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## *06] ವಿಷಯದ ಸಂಖ್ಯೆ :–ತೆಆಸ್ಥಾಸ/118/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಮುಲೆಅ/ಆಯವ್ಯಯ/ಪಿಆರ್/2899/12–13, ದಿನಾಂಕ : 11.10.2012 ರಲ್ಲಿ ವಿವರಿಸಿರುವಂತೆ, ವಸಂತನಗರ, ವಾರ್ಡ್ ಸಂಖ್ಯೆ : 93ರಲ್ಲಿರುವ ಡೋಬಿಘಾಟ್‌ನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಯ ಅಂದಾಜು ಮೊತ್ತ ರು.94.00 ಲಕ್ಷಗಳಿಗೆ ಅನುಮೋದನೆ ನೀಡಲು ಪ್ರಸ್ತಾವನೆ ಸಲ್ಲಿಸಲಾಗಿದೆ.

ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸುವ ಅವಶ್ಯವಿರುವುದರಿಂದ 2012–13ನೇ ಸಾಲಿನ ಆಯವ್ಯಯದಲ್ಲಿ ಅವಕಾಶ ಕಲ್ಪಿಸುವ ಬಗ್ಗೆ ಕಾಮಗಾರಿಯ ಮೊತ್ತ ರೂ.94.00 ಲಕ್ಷಗಳನ್ನು ನಿಗಧಿಪಡಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ ಸಂಖ್ಯೆ : ಮುಲೆಅ/ಆಯವ್ಯಯ/ಪಿಆರ್/2096/2012–13, ರಂತೆ ಪತ್ರ ದಿನಾಂಕ : 15.06.2012 ರಂದು ಟಿಪ್ಪಣಿಯನ್ನು ಮಂಡಿಸಲಾಗಿತ್ತು. ಆದರೆ ಈ ಬಗ್ಗೆ ಯಾವುದೇ ವಿಧವಾದ ತೀರ್ಮಾನವನ್ನು ಕೈಗೊಳ್ಳದಿರುವ ಸಂಬಂಧದಲ್ಲಿ ದಿನಾಂಕ : 17.09.2012ರಂದು ಮಾನ್ಯ ಆಯುಕ್ತರವರೊಂದಿಗೆ ಚರ್ಚಿಸಿದಂತೆ ಮಾನ್ಯ ಆಯುಕ್ತರ ದಿನಾಂಕ : 03.10.2012ರ ಅನುಮೋದನೆಯಲ್ಲಿ ಕೈಗೊಂಡ ತೀರ್ಮಾನದಂತೆ ಮೇಲ್ಕಂಡ ಕಾಮಗಾರಿಯನ್ನು 2012–13ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀಷಿಕೆ ಪಿ–1806 ಅಡಿ (POW) ಕಾಮಗಾರಿ ಕಾರ್ಯಕ್ರಮ ಪಟ್ಟಿಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿ||.11.10.2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## *07] ವಿಷಯದ ಸಂಖ್ಯೆ :–ತೆಆಸ್ಥಾಸ/119/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಮುಅ(ರಾ.ರಾ.ನ)/ಪಿಆರ್/1333/12–13, ದಿನಾಂಕ : 12.10.2012 ರಲ್ಲಿ ವಿವರಿಸಿರುವಂತೆ, ಮಾನ್ಯ ಇಂಧನ ಸಚಿವರು ಉಲ್ಲೇಖಿತ ಟಿಪ್ಪಣಿಯಲ್ಲಿ 2011–12ನೇ ಸಾಲಿನ ಸ್ಥಳೀಯ ಶಾಸಕರ ಅನುದಾನದಲ್ಲಿ ರೂ.5.00 ಕೋಟಿಗಳನ್ನು ಮೀಸಲಿರಿಸಿದ್ದು ತಮ್ಮ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ 5 ವಾರ್ಡ್‌ಗಳಿಗೆ ತಲಾ ರೂ.1.00 ಕೋಟಿ ಅನುದಾನವನ್ನು ತಮ್ಮ ಪತ್ರದೊಂದಿಗೆ ಲಗತ್ತಿಸಿರುವ ಕಾಮಗಾರಿಗಳ ಪಟ್ಟಿಗೆ ಅನುಸಾರವಾಗಿ ಅನುದಾನ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಯಶವಂತಪುರ ವಿಧಾನಸಭಾ ಕ್ಷೇತ್ರ ಒಟ್ಟು 5 ವಾರ್ಡ್‌ಗಳ (ವಾರ್ಡ್ ಸಂಖ್ಯೆ.40, 72, 13, 159 & 198) ವ್ಯಾಪ್ತಿಯನ್ನು ಒಳಗೊಂಡಿದ್ದು, 2011–12ನೇ ಸಾಲಿನ ಆಯವ್ಯಯದಲ್ಲಿ ರೂ.5.00 ಕೋಟಿಗಳನ್ನು ಶಾಸಕರ ಅನುದಾನ ಲೆಕ್ಕ ಶೀರ್ಷಿಕೆ ಪಿ2330ರಲ್ಲಿ ಮೀಸಲಿರಿಸಲಾಗಿತ್ತು. ವಾರ್ಡ್ ಸಂಖ್ಯೆ 198ರ ಪಾಲಿಕೆ ಸದಸ್ಯರ ಕೋರಿಕೆ ಮೇರೆಗೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ರೂ.3.00 ಕೋಟಿ ಅನುದನ ಬಿಡುಗಡೆ ಮಾಡಬೇಕೆಂದು ಆಯುಕ್ತರಿಗೆ ಸುಚಿಸಿದ್ದರ ಮೇರೆಗೆ ಈ ಕಾಮಗಾರಿಗಳಿಗೆ ಜಾಬ್ ಕೋಡ್ ನೀಡಲಾಗಿದೆ. ಆದರೆ, ಇದುವರೆವಿಗೂ ಈ ಜಾಬ್ ಸಂಖ್ಯೆಗಳಿಗೆ ಅನುಗುಣವಾಗಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುವುದಿಲ್ಲ.

ಆದರೆ, 2011–12ನೇ ಸಾಲಿಗೆ ಒದಗಿಸಿದ್ದ ಶಾಸಕರ ಅನುದಾನ ಲೆಕ್ಕ ಶೀರ್ಷಿಕೆ ಪಿ2330ರಲ್ಲಿನ ಈ ಕಾಮಗಾರಿಗಳನ್ನು 2012–13ನೇ ಸಾಲಿನ Spill over ಕಾಮಗಾರಿಗಳ ಪಟ್ಟಿಯಲ್ಲಿ ಸೇರಿಸಲಾಗಿರುವುದಿಲ್ಲ.

ಮಾನ್ಯ ಸಚಿವರ ಸೂಚನೆಯಂತೆ ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪಾಲಿಕೆಯ 5 ವಾರ್ಡ್‌ಗಳಿಗೆ ತಲಾ ರೂ.1.00 ಕೋಟಿ ಅಂದಾಜು ವೆಚ್ಚದಲ್ಲಿ ಕಾಮಗಾರಿ ಪಟ್ಟಿಯನ್ನು ಸಿದ್ದಪಡಿಸಿ ಮುಖ್ಯ ಅಭಿಯಂತರರು ಹಾಗೂ ಜಂಟಿ ಆಯುಕ್ತರು (ರಾಜರಾಜೇಶ್ವರಿನಗರ) ರವರು ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಒಪ್ಪಿದ್ದಲ್ಲಿ, ಈ ಹಿಂದೆ ಸದರಿ ಅನುದಾನದಲ್ಲಿ ರೂ.3.00 ಕೋಟಿಗಳಿಗೆ ವಿವಿಧ ಕಾಮಗಾರಿಗಳಿಗಾಗಿ ನೀಡಿದ್ದ ಜಾಬ್ ಸಂಖ್ಯೆಗಳನ್ನು ರದ್ದುಪಡಿಸಬೇಕಾಗಿರುತ್ತದೆ. ಹಾಗೂ ಇದು 2011–12ನೆ ಸಲಿನ ಆಯವ್ಯಯಕ್ಕೆ ಸಮಬಂಧಿಸಿದ್ದಾಗಿದ್ದು, 2012–13ನೇ ಸಾಲಿನ Spill over ಕಾಮಗಾರಿಗಳ ಪಟ್ಟಿಯಲ್ಲಿ ಸೇರಿಸಿಲ್ಲದಿರುವುದರಿಂದ ಮಾನ್ಯ ಇಂಧನ ಸಚಿವರು ಸೂಚಿಸಿರುವಂತೆ ಕ್ರಮವಹಿಸಲು ಈಗಾಗಲೇ ನೀಡಿರುವ ಜಾಬ್ ಕೋಡ್‌ಗಳನ್ನು ರದ್ದುಪಡಿಸಲು ಹಾಗೂ 2012–13ನೇ ಸಲಿನ ಆಯವ್ಯಯದ ಯಾವ ಲೆಕ್ಕಶೀರ್ಷಿಕೆಯಡಿ ರೂ.5.00 ಕೋಟಿಗಳ ಅನುದಾನವನ್ನು ಭರಿಸಬೇಕೆಂಬುದರ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ

**ನಿರ್ಣಯ: 2012–13ನೇ ಸಾಲಿನ ಆಯವ್ಯಯದಲ್ಲಿನ ಲೆಕ್ಕಶೀರ್ಷಿಕೆ – 17 ಕಾಮಗಾರಿ – ಸಾರ್ವಜನಿಕ ಕಾಮಗಾರಿಗಳು (ವಲಯಗಳು) ವಲಯ ರಸ್ತೆಗಳು, ಬೃಬೆಂ.ಮ.ಪಾ. ವ್ಯಾಪ್ತಿಯಲ್ಲಿನ ವಿಧಾನ ಸಭಾ ಕ್ಷೇತ್ರಗಳ ಅಭಿವೃದ್ಧಿ ಕಾಮಗಾರಿಗಳು ಪಿ–2201ರಲ್ಲಿ ಲಭ್ಯವಿರುವ ಮುಂದುವರಿದ ಕಾಮಗಾರಿಗಳ ಮೊತ್ತದಲ್ಲಿ ಆಯುಕ್ತರ ಟಿಪ್ಪಣಿ ದಿ॥12.10.12ರಲ್ಲಿ ಪ್ರಸ್ತಾಪಿಸಿರುವ ಅನುದಾನವನ್ನು ಭರಿಸಲು ಸಮಿತಿಯು ತೀರ್ಮಾನಿಸಿತು.**

## *08] ವಿಷಯದ ಸಂಖ್ಯೆ :–ತೆಆಸ್ಥಾಸ/120/2012–13*

ಆಯುಕ್ತರ ಟಿಪ್ಪಣಿ ದಿನಾಂಕ : 21–12–2011 ರಲ್ಲಿ ವಿವರಿಸಿರುವಂತೆ, ಮೆ॥ ಬ್ರಿಗೇಡ್ ಶಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಅಸೋಸಿಯೇಷನ್‌ರವರಿಗೆ ಬ್ರಿಗೇಡ್ ರಸ್ತೆಯಲ್ಲಿ ಎಂ.ಜಿ ರಸ್ತೆಯಿಂದ ರೆಕ್ಸ್ ಚಿತ್ರಮಂದಿರದವರೆಗೂ ಪಾವತಿ ಮತ್ತು ನಿಲುಗಡೆ ಸ್ಥಳದಲ್ಲಿ ನಿಲುಗಡೆ ಶುಲ್ಕ ವಸೂಲು ಮಾಡಲು ಟೆಂಡರ್ ಮುಖಾಂತರ ಕರಾರು ಮಾಡಿಕೊಂಡಿದ್ದು, ದಿನಾಂಕ: 01–12–2009 ರಿಂದ 30.11.2010 ರವರೆಗೂ ಒಂದು ವರ್ಷ ಪೂರ್ಣಗೊಳಿಸಿದ್ದು, ಮೆ॥ ಬ್ರೀಗೇಡ್ ಎಸ್ಟಾಬ್ಲಿಷ್‌ಮೆಂಟ್ ಸಂಸ್ಥೆಯವರು ದಿನಾಂಕ: 01–09–2009 ರಿಂದ ಯಶಸ್ವಿ ಬಿಡ್‌ದಾರರಾಗಿ ಪ್ರತಿ ತಿಂಗಳಿಗೆ ರೂ.2,25,000/– ರಂತೆ ಇದುವರೆವಿಗೂ ಮಾನ್ಯ ಆಯುಕ್ತರ ಖಾತೆಗೆ ರೂ. 51,75,000/–ಗಳನ್ನು ಜಮಾ ಮಾಡಲಾಗಿದೆ. ಅಂದರೆ ದಿನಾಂಕ: 01–12–2009 ರಿಂದ 30–11–2011 ರವರೆಗೆ ಪಾರ್ಕಿಂಗ್ ಶುಲ್ಕವನ್ನು ಪಾವತಿಸಿರುತ್ತಾರೆ. ದಿನಾಂಕ: 30–11–2011 ಕ್ಕೆ 2 ವರ್ಷ ಅವಧಿ ಪೂರ್ಣಗೊಂಡಿದ್ದು ಸದರಿ ಸಂಸ್ಥೆಯವರು ಮುಂದಿನ ಒಂದು ವರ್ಷಕ್ಕೆ ಅಂದರೆ ದಿನಾಂಕ: 01–12–2011ರಿಂದ 30–11–2012 ರವರೆಗೆ ನವೀಕರಿಸಲು ಅನುಮತಿ ಕೋರಿ ದಿನಾಂಕ: 10–10–2011 ರಂದು ಅರ್ಜಿ ನೀಡಿರುತ್ತಾರೆ. ಮುಂದುವರೆದಂತೆ ಸದರಿ ಸಂಸ್ಥೆಯವರ ಸೇವೆಯು ತೃಪ್ತಿಕರವಾಗಿರುವುದರಿಂದ ಟೆಂಡರ್ ಕರಾರು ಪತ್ರದ ದಿನಾಂಕ: 01.12.2009ರ ಪ್ರಕಾರ ಮುಂದಿನ ವರ್ಷಕ್ಕೆ ನವೀಕರಿಸಲು ಅಥವಾ ಹೊಸದಾಗಿ ಟೆಂಡರ್ ಕರೆಯುವ ಬಗ್ಗೆ ತಿರ್ಮಾನ ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ: 21–12–2011ರ ಟಿಪ್ಪಣಿಯನ್ನು ಪರಿಶೀಲಿಸಿ, ಮೆ॥ ಬ್ರಿಗೇಡ್ ಶಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಅಸೋಸಿಯೇಷನ್‌ರವರಿಗೆ ಬ್ರಿಗೇಡ್ ರಸ್ತೆಯಲ್ಲಿ ಎಂ.ಜಿ ರಸ್ತೆಯಿಂದ ರೆಕ್ಸ್ ಚಿತ್ರಮಂದಿರದವರೆಗೂ ಪಾವತಿ ಮತ್ತು ನಿಲುಗಡೆ ಸ್ಥಳದಲ್ಲಿ ನಿಲುಗಡೆ ಶುಲ್ಕ ವಸೂಲು ಮಾಡಲು ದಿನಾಂಕ: 01.12.2011 ರಿಂದ 30–11–2012ರ ವರೆಗೆ ಟೆಂಡರ್ ಕರಾರು ಪತ್ರದ ದಿನಾಂಕ: 01–12–2009ರ ಪ್ರಕಾರ ಮುಂದಿನ ಒಂದು ವರ್ಷಕ್ಕೆ ನವೀಕರಿಸಲು ಸಮಿತಿಯು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07–02–2012ರ ನಿರ್ಣಯವನ್ನು ಮಾರ್ಪಡಿಸುತ್ತಾ ಪಲಿಕೆಯ ಆದಾಯದ ಹಿತದೃಷ್ಟಿಯಿಂದ ಹೊಸದಾಗಿ ಟೆಂಡರ್ ಕರೆಯುವುದೆಂದು ತೀರ್ಮಾನಿಸಿತುವ ತೆರಿಗೆ

ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ : 11.04.2012ರ ನಿರ್ಣಯವನ್ನು ಪರಿಶೀಲನೆಗೆ ಕಡತವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ದಿನಾಂಕ : 30.08.2012ರ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಯಿತು.

**ನಿರ್ಣಯ: ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿ॥.11.04.12ರ ಸಭೆಯ ನಡವಳಿಗಳನು ಮರು ಸ್ಥಿರೀಕರಿಸಲು ಸಭೆಯು ತೀರ್ಮಾನಿಸಿತು.**

## *09] ವಿಷಯದ ಸಂಖ್ಯೆ :-ತೆಆಸ್ಥಾಸ/121/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ದಿನಾಂಕ : 03.11.2012 ರಲ್ಲಿ ವಿವರಿಸಿರುವಂತೆ, ಶ್ರೀಮತಿ ಎನ್. ಶಕುಂತಲ ದೊಡ್ಡಲಕ್ಕಪ್ಪ, ನಗರಪಾಲಿಕೆ ಸದಸ್ಯರು, ವಾರ್ಡ್ ನಂ.125 ಮಾರೇನಹಳ್ಳಿ ಹಾಗೂ ಸದಸ್ಯರು, ತೋಟಗಾರಿಕೆ ಸ್ಥಾಯಿ ಸಮಿತಿ, ಬೃಹತ್ ಬೆಂಗಳೂರು ಮಹಾನಗರ ರವರ ಉಲ್ಲೇಖಿತ ಪತ್ರದಲ್ಲಿ 2012-13ನೇ ಸಾಲಿನ ಆಯವ್ಯಯದಲ್ಲಿ ಅನುದಾನ ನಿಗಧಿಪಡಿಸಲು ಕೋರಿರುತ್ತಾರೆ.

ವಾರ್ಡ್ ನಂ. 125ರ ನಂದಾದೀಪ ಬಡಾವಣೆಯ ವಾರ್ಡ್ ಕಛೇರಿ ಮತ್ತು ಇನ್ನಿತರೆ ಅವಶ್ಯಕ ಕಛೇರಿಗಳ ನಿರ್ಮಾಣಕ್ಕೆ ರೂ.10.00 ಲಕ್ಷ ಮೊತ್ತವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-0541 ತುರ್ತು ಕಾಮಗಾರಿಗಳ ಅನುದಾನದಡಿ ಜಾಬ್ ಸಂಖ್ಯೆ ನೀಡಲಾಗಿದ್ದು, ಸದರಿ ಜಾಬ್ ಸಂಖ್ಯೆಯನ್ನು ರದ್ದುಗೊಳಿಸಿ ಲೆಕ್ಕಶೀರ್ಷಿಕೆ ಪಿ-1808- Construction of Wad offices-Current Works ಅಡಿಯಲ್ಲಿ ರೂ.1,250.00 ಲಕ್ಷಗಳ ಮೊತ್ತದಲ್ಲಿ ರೂ.60.00 ಲಕ್ಷಗಳ ಕಾಮಗಾರಿ ಮೊತ್ತವನ್ನು 2012-13ನೇ ಸಾಲಿನ ಆಯವ್ಯಯದಲ್ಲಿ ಒದಗಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿ॥. 03.11.12ರ ಟಿಪ್ಪಣಿಯನ್ನು ಮಾರ್ಪಡಿಸುತ್ತಾ ಈ ಕಾಮಗಾರಿಗೆ 2012-13ನೇ ಸಾಲಿನ ಆಯವ್ಯಯದಲ್ಲಿ ರೂ.50 ಲಕ್ಷ (ರೂ ಐವತ್ತು ಲಕ್ಷ) ಗಳನ್ನು ಒದಗಿಸಲು ಸಮಿತಿಯು ತೀರ್ಮಾನಿಸಿತು.**

## *10] ವಿಷಯದ ಸಂಖ್ಯೆ :-ತೆಆಸ್ಥಾಸ/122/2012-13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(5ಜಿ)ಪಿಆರ್/206/12-13, ದಿನಾಂಕ : 07.11.2012 ರಲ್ಲಿ ವಿವರಿಸಿರುವಂತೆ, ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 25 ಎಸ್‌ಆರ್‌ಪಿ 2012, ಬೆಂಗಳೂರು, ದಿನಾಂಕ : 17.10.2012 ರ ಆದೇಶದಲ್ಲಿ ದಿನಾಂಕ : 01-07-2012 ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರಿ ನೌಕರರಿಗೆ ಹಾಲಿ ಲಭ್ಯವಿರುವ ತುಟ್ಟಿ ಭತ್ಯೆ ದರವನ್ನು ಮೂಲ ವೇತನದ ಶೇಕಡ 04 ರಷ್ಟು ಹೆಚ್ಚಿಸಿ ಮಂಜೂರಾತಿ ನೀಡಿರುತ್ತದೆ. ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 25 ಎಸ್‌ಆರ್‌ಪಿ 2012, ಬೆಂಗಳೂರು, ದಿನಾಂಕ : 17.10.2012 ರ ಆದೇಶದಲ್ಲಿ ತಿಳಿಸಿರುವಂತೆ ಮಂಜೂರಾಗಿರುವ ತುಟ್ಟಿ ಭತ್ಯೆಯನ್ನು ನಗದಾಗಿ ಮರು ಆದೇಶ ಹೊರಸುವವರೆಗೂ ಪಾವತಿಸಲು ಆದೇಶವಾಗಿರುತ್ತದೆ. (ಸರ್ಕಾರಿ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ)

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಅನುಕೂಲವಾಗುವಂತೆ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 25 ಎಸ್‌ಆರ್‌ಪಿ 2012, ಬೆಂಗಳೂರು, ದಿನಾಂಕ : 17.10.2012 ರ ಸರ್ಕಾರಿ ಆದೇಶವನ್ನು ನಗರ ಪಾಲಿಕೆಯಲ್ಲಿ ತುಟ್ಟಿ ಭತ್ಯೆಯ ಹೆಚ್ಚುವರಿಯಾದ ಶೇಕಡ 04ರಷ್ಟು ವೆಚ್ಚವನ್ನು 2012-13ನೇ ಸಾಲಿನ ಆಯವ್ಯಯದಲ್ಲಿ ಸಾಮಾನ್ಯ ಆಡಳಿತ ಇತರೆ ಭತ್ಯೆಗಳ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಯವರ ವರದಿ ದಿನಾಂಕ : 07.11.2012ರ ರಲ್ಲಿ ಈ ಕೆಳಕಂಡಂತೆ ಅಭಿಪ್ರಾಯ ವರದಿ ನೀಡಿರುತ್ತಾರೆ.

ಈ ಹೆಚ್ಚುವರಿ ತುಟ್ಟಿ ಭತ್ಯೆಯಿಂದಾಗಿ ಪಾಲಿಕೆಗೆ ರೂ.67,48,079/- ಗಳಷ್ಟು ಆರ್ಥಿಕ ಹೊಣೆಗಾರಿಕೆ (Financial Implication) ಬೀಳಲಿದೆ ಎಂದು ಮುಖ್ಯ ಲೆಕ್ಕಾಧಿಕಾರಿಗಳು ನೀಡಿರುವ ಅಭಿಪ್ರಾಯ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 25 ಎಸ್‌ಆರ್‌ಪಿ 2012, ಬೆಂಗಳೂರು, ದಿನಾಂಕ : 17.10.2012 ರ ಸರ್ಕಾರಿ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಮಾನ್ಯ ಆಯುಕ್ತರ ದಿII.07.11.12ರ ಟಿಪ್ಪಣಿಯನ್ನು ಒಪ್ಪಲಾಯಿತು.**

## *11] ವಿಷಯದ ಸಂಖ್ಯೆ :–ತೆಆಸ್ಥಾಸ/123/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ದಿನಾಂಕ : 09.11.2012 ರಲ್ಲಿ ವಿವರಿಸಿರುವಂತೆ, ಶ್ರೀ. ಎಸ್.ಹರೀಶ್ ಬಿ.ಇ. ಮಾಜಿ ಉಪ ಮಹಾಪೌರರು ಹಾಗೂ ಸದಸ್ಯರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಉಲ್ಲೇಖಿತ ಪತ್ರದಲ್ಲಿ 2012–13ನೇ ಸಾಲಿನ ಆಯವ್ಯಯದಲ್ಲಿ ಅನುದಾನ ನಿಗಧಿಪಡಿಸಲು ಕೋರಿರುತ್ತಾರೆ.

ಡಾII. ಸರ್.ಎಂ. ವಿಶ್ವೇಶ್ವರಯ್ಯನವರ ಪುತ್ಥಳಿಯ ಅನಾವರಣ ದಿನಾಂಕ 5–09–2012 ರಂದು ಕೈಗೊಂಡು ಹಾಗೂ ಜನ್ಮ ದಿನದ ಆಚರಣೆಯ ಕಾರ್ಯಕ್ರಮ ಜರುಗಿಸಿದ್ದು, ಈ ಸಲುವಾಗಿ ತಗುಲಿರುವ ವೆಚ್ಚ ರೂ.4,86,000/– ಗಳ ಅಂದಾಜು ಪಟ್ಟಿ ತಯಾರಿಸಿ ಸದರಿ ಮೊತ್ತವನ್ನು ಡಿ.ಸಿ.ಬಿಲ್ಲಿನಲ್ಲಿ ಬಿಡುಗಡೆ ಮಾಡಲು ಕೋರಿದ್ದು, ಈ ವೆಚ್ಚವನ್ನು 2012–13ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ–0015 ಪಾಲಿಕೆ ಉತ್ಸವ ಮತ್ತು ಸಮಾರಂಭಗಳು ಅಡಿ ಮೀಸಲಿರಿಸಿರುವ ರೂ. 500.00 ಲಕ್ಷಗಳಲ್ಲಿ ಭರಿಸಲು ನಿರ್ಣಯ ಕೈಗೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿII.09.11.12ರ ಟಿಪ್ಪಣಿಯನ್ನು ಒಪ್ಪಲಾಯಿತು.**

## *12] ವಿಷಯದ ಸಂಖ್ಯೆ :–ತೆಆಸ್ಥಾಸ/124/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 16.11.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗೋವಿಂದರಾಜನಗರ ವಿಭಾಗ ವ್ಯಾಪ್ತಿಯ ವಾರ್ಡ್ ಸಂಖ್ಯೆ : 128ರಲ್ಲಿ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಗೊಳಿಸಲು 2010–11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–2193 ಆಯ್ದ ರಸ್ತೆಗಳ ನವೀಕರಿಸಿದ ಪಾದಚಾರಿ ಮಾರ್ಗಗಳ ಅಭಿವೃದ್ಧಿ (Development of Modern Footpath in Selected Roads) ಅಡಿಯಲ್ಲಿ ಕೈಗೆತ್ತಿಕೊಂಡು ನಿರ್ವಹಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಸ್ಥಾಯಿ ಸಮಿತಿಯು ದಿನಾಂಕ : 14.07.2011 ರಂದು ವಿಷಯ ಸಂಖ್ಯೆ : ತೆಆಸ್ಥಾಸ/141/2011–12 ರಂತೆ ಅನುಮೋದಿಸಲಾಗಿರುತ್ತದೆ.

2010–11ನೇ ಸಾಲಿನಲ್ಲಿ ಸದರಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ವಿಳಂಬವಾದ ಹಿನ್ನೆಲೆಯಲ್ಲಿ 2011–12ನೇ ಸಾಲಿನ ಆಯ್ಯಯದ ಲೆಕ್ಕಶೀರ್ಷಿಕೆ ಪಿ–2254 ವಿಶೇಷ ಅಭಿವೃದ್ಧಿ ಕಾಮಗಾರಿಗಳು ವಾರ್ಡ್ ಸಂಖ್ಯೆ : 128 (Special Development Works in Ward No:128) ಅಡಿಯಲ್ಲಿ ಮೀಸಲಿಟ್ಟ ರೂ.300 ಲಕ್ಷಗಳ ಅನುದಾನದಲ್ಲಿ ಒಟ್ಟು 4 ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲು ಮಾನ್ಯ ಪಾಲಿಕೆ ಸದಸ್ಯರು ಕೋರಲಾದ ಮೇರಗೆ ದಿನಾಂಕ : 19.05.2012ರಂದು ಮುಖ್ಯ ಆರ್ಥಿಕ ಅಧಿಕಾರಿಗಳು 2012–13ನೇ ಸಾಲಿನ ಮುಂದುವರೆದ ಕಾಮಗಾರಿಗಳ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲು ಸೂಚಿಸಲಾಗಿತ್ತು. ಅದರಂತೆ 2012–13ನೇ ಸಾಲಿನ ಮುಂದುವರೆದ ಕಾಮಗಾರಿಗಳ ಪಟ್ಟಿಯಲ್ಲಿ ಈ ಕಾಮಗಾರಿಗಳನ್ನು ಈಗಾಗಲೇ ಸೇರ್ಪಡೆಗೊಳಿಸಲಾಗಿದೆ.

| **Sl No** | **Name of Works** | **Estimated Cost. ` Lakhs** |
|---|---|---|
| 1 | 2 | 3 |
| 1 | Improvements and development of footpath and drains in NGEF main road in ward no.128 | 98.00 |
| 2 | Improvements and development of footpath and drains from 80feet road to Unversity gate in ward no.128 | 72.00 |

| | | |
|---|---|---|
| 3 | Improvements and development of footpath and drains from Goodwell apartment to Jyothinagara main road in 80feet road ward no.128 | 61.60 |
| 4 | Improvements and development of footpath and drains from Jyothinagara main road to Janabharathi road in 80feet road ward no.128 | 68.40 |
| | **Total Estimated Cost. ` Lakhs** | 300.00 |

ಮೇಲ್ಕಂಡ ಕಾಮಗಾರಿಗಳನ್ನು 2012–13ನೇ ಸಾಲಿನ ಆಯವ್ಯಯ ಪುಸ್ತಕದ ಪುಟ ಸಂಖ್ಯೆ : 114ರ ಲೆಕ್ಕಶೀರ್ಷಿಕೆ ಪಿ–2913 ವಾರ್ಡ್ : 128ರ ಅಭಿವೃದ್ಧಿ ಕಾಮಗಾರಿಗಳು (Development Works in Ward No:128) ಅಡಿಯಲ್ಲಿ ರೂ.300.00 ಗಳನ್ನು ಮೀಸಲಿರಿಸಲಾಗಿದ್ದು ಮುಂದುವರೆದು, ದೇಶದ ಅತ್ಯಂತ ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಾದ ನ್ಯಾಷನಲ್ ಲಾಸ್ಕೂಲ್, ಬೆಂಗಳೂರು ವಿಶ್ವವಿದ್ಯಾಲಯ, ಐಎಸ್ಇಸಿ ಮುಂತಾದ ವಿದ್ಯಾಸಂಸ್ಥೆಗಳಿಗೆ ಇವು ಸಂಪರ್ಕಿಸುವ ರಸ್ತೆಗಳಾಗಿದ್ದು ದೇಶ ವಿದೇಶದ ಗಣ್ಯ ವ್ಯಕ್ತಿಗಳು ಇಲ್ಲಿ ನಿತ್ಯವು ಸಂಚರಿಸುತ್ತಿದ್ದು ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಕಾಮಗಾರಿಗಳನ್ನು ಕೂಡಲೆ ಕೈಗೆತ್ತಿಕೊಂಡು ನಿರ್ವಹಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿ॥16.11.12ರ ಟಿಪ್ಪಣಿಯನ್ನು ಒಪ್ಪಲಾಯಿತು.**

## ***13] ವಿಷಯದ ಸಂಖ್ಯೆ :–ತೆಆಸ್ಥಾಸ/125/2012–13***

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(3ಎ)ಸಿಪಿಆರ್/82/12–13, ದಿನಾಂಕ : 17–11–2012 ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ದಿನಾಂಕ : 18–08–2012ರಂದು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ಶ್ರೀ ಸಿ.ಕೆ. ದಶವಂತ್, ನಿವೃತ್ತ ಉಪ ಆಯುಕ್ತರು (ಕಂದಯ), ಇವರನ್ನು ಮಹಾಪೌರರ ವಿಶೇಷ ಕರ್ತವ್ಯಾಧಿಕಾರಿಯನ್ನಾಗಿ ನಿಯೋಜನೆ ಮಾಡಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಕೋರಿರುವ ಸಂಬಂಧ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ : ನಇ438 ಎಂಎನ್‌ಯು 2012 ದಿನಾಂಕ : 10–09–2012ರ ಸರ್ಕಾರದ ಪತ್ರದಲ್ಲಿ ಪೂಜ್ಯ ಮಹಾಪೌರರ ಕೋರಿಕೆಯನ್ನು ನಿಮಾನುಸಾರ ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ಕೋರಲಾಗಿತ್ತು.

ಈ ಸಂಬಂಧ ಪಾಲಿಕೆ ವತಿಯಿಂದ ಈ ಕಛೇರಿ ಸಮಸಂಖ್ಯೆಯಲ್ಲಿ ಸರ್ಕಾರಕ್ಕೆ ಬರೆದಿರುವ ಪತ್ರ ದಿನಾಂಕ : 09–10–2012ರಂತೆ ಸರ್ಕಾರಕ್ಕೆ ಪತ್ರ ಬರೆದು, ಶ್ರೀ ಸಿ.ಕೆ. ದಶವಂತ್, ನಿವೃತ್ತ ಉಪ ಆಯುಕ್ತರು (ಕಂದಾಯ), ಇವರನ್ನು ಪೂಜ್ಯ ಮಹಾಪೌರರ ವಿಶೇಷ ಕರ್ತವ್ಯಾಧಿಕಾರಿಯನ್ನಾಗಿ ಸಂಚಿತ ವೇತನದ ಮೇಲೆ ನಿಯೋಜಿಸಬಹುದಾಗಿದೆ ಎಂದು ಸರ್ಕಾರಕ್ಕೆ ಅಭಿಪ್ರಾಯವನ್ನು ತಿಳಿಸಲಾಗಿತ್ತು.

ಈ ಬಗ್ಗೆ ಸರ್ಕಾರವು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ : ನಇ438 ಎಂಎನ್‌ಯು 2012 ದಿನಾಂಕ : 20–10–2012ರ ಪತ್ರದಲ್ಲಿ ಶ್ರೀ ಸಿ.ಕೆ. ದಶವಂತ್, ನಿವೃತ್ತ ಉಪ ಆಯುಕ್ತರು (ಕಂದಾಯ), ಇವರನ್ನು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ನಿಯಮಗಳು 1977ರ 20ರಂತೆ ಕನಾಟಕ ನಾಗರೀಕ ಸೇವಾ ನಿಯಮಗಳು 313ರ ನಿಯಮಗಳಂತೆ ಆರ್ಥಿಕ ಸೌಲಭ್ಯಗಳನ್ನು ನಿಗಧಿಪಡಿಸಿ ಪಾವತಿಸುವ ಷರತ್ತುಗೊಳಪಡಿಸಿ, ನೇಮಿಸಿಕೊಳ್ಳಲು ಅನುಮೋದನೆ ನೀಡಿರುತ್ತದೆ.

ಈ ಸಂಬಂಧ ಸರ್ಕಾರವು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ:ನಇ438 ಎಂಎನ್‌ಯು 2012 ದಿನಾಂಕ:10–09–2012ರ ಪತ್ರದಲ್ಲಿ ಅನುಮೋದನೆ ನೀಡಿರುವಂತೆ ಶ್ರೀ ಸಿ.ಕೆ. ದಶವಂತ್, ನಿವೃತ್ತ ಉಪ ಆಯುಕ್ತರು (ಕಂದಾಯ), ಇವರನ್ನು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ನಿಯಮಗಳು 1977ರ 20ರಂತೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು 313ರ ನಿಯಮಗಳಂತೆ ಆರ್ಥಿಕ ಸೌಲಭ್ಯಗಳನ್ನು ನಿಗಧಿಪಡಿಸಿ ಪಾವತಿಸುವ ಷರತ್ತುಗೊಳಪಡಿಸಿ, ಪಾಲಿಕೆಯಲ್ಲಿ ಪೂಜ್ಯ ಮಹಾಪೌರರ ವಿಶೇಷ ಕರ್ತವ್ಯಾದಿಕಾರಿಯನ್ನಾಗಿ, ಒಂದು ವರ್ಷದ ಅವಧಿಗೆ ನಿಯೋಜಿಕೊಳ್ಳಲು ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಮಾನ್ಯ ಆಯುಕ್ತರು ದಿ॥07.11.12ರ ಟಿಪ್ಪಣಿಯನ್ನು ಒಪ್ಪಲಾಯಿತು.**

## *14] ವಿಷಯದ ಸಂಖ್ಯೆ :–ತೆಆಸ್ಥಾಸ/126/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ದಿನಾಂಕ : 20–10–2012 ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ : 21, ಬಳ್ಳಾರಿ ರಸ್ತೆಯ ಹೆಬ್ಬಾಳ ಮೆಲು ಸೇತುವೆಯ ಬಳಿ ಇರುವ ಪಾಲಿಕೆಯ 3 ಅಂತಸ್ತುಗಳ ಕಟ್ಟಡವನ್ನು ಸರ್ಕಾರಿ ಸ್ವಾಮ್ಯದ ಬೆಸ್ಕಾಂ (Bescom) ಕಛೇರಿಯ ಕಾರ್ಯ ಮತ್ತು ಪಾಲನಾ ಘಟಕವನ್ನು ತೆರೆಯಲು ಕೋರಿ ಸಹಾಯಕ ಕಾರ್ಯನಿರ್ವಾಹಕ ಇಂಜೀನಿಯರ್ (ವಿದ್ಯುತ್) ಬೆಸ್ಕಾಂ ಸಿ 4 ಉಪ ವಿಭಾಗ, ಗಂಗಾನಗರ ರವರು ಅರ್ಜಿ ಸಲ್ಲಿಸಿರುವ ಮೇರೆಗೆ ಸಂಬಂಧಪಟ್ಟ ವಾರ್ಡ್ ನಂ.21ರ ಪಾಲಿಕೆ ಸದಸ್ಯರು ಶಿಫಾರಸ್ಸು ಪತ್ರ ನೀಡಿದ್ದು, ಲೋಕೋಪಯೋಗಿ ಇಲಾಖೆಯ ದರಗಳನ್ವಯ ಪ್ರತಿ ಮಾಹೆಯಾನ ಬಾಡಿಗೆ ದರ ರೂ.11,000/– ಗಳಿಗೆ ನಕ್ಷೆ ಮತ್ತು ಅಂದಾಜು ಪಟ್ಟಿಗಳೊಂದಿಗೆ ನಿಗಧಿಪಡಿಸಿರುವ ಮುಖ್ಯ ಅಭಿಯಂತರರು (ಪೂರ್ವ), ಬಿಬಿಎಂಪಿ ರವರ ಶಿಫಾರಸ್ಸು ಮೇರೆಗೆ ಬೆಸ್ಕಾಂ ಸಂಸ್ಥೆಗೆ 5–ವರ್ಷಗಳ ಅವಧಿಗೆ ಹಂಚಿಕೆ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಘನ ಸಮಿತಿಯು, ವಿಶೇಷ ಆಯುಕ್ತರ ದಿ॥ 20–10–12ರ ಟಿಪ್ಪಣಿಯನ್ನು ಮಾರ್ಪಡಿಸಿ ಪ್ರಸ್ತುತ ಸಾಲಿನ ಮಾರುಕಟ್ಟೆ ದರವನ್ನು ನಿಗಧಿಪಡಿಸಿ 3 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವ ದಿನಾಂಕ : 06–11–2012ರ ನಿರ್ಣಯ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿ॥.20.10.12ರ ಟಿಪ್ಪಣಿಯನ್ನು ಒಪ್ಪಲಾಯಿತು.**

## *ಸ್ಥಳ ಪರಿಶೀಲನೆ ಕಡತ :–*

## *01] ವಿಷಯದ ಸಂಖ್ಯೆ :–ತೆಆಸ್ಥಾಸ/61/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/92/10–11, ದಿನಾಂಕ ಃ 10–01–2012ರಲ್ಲಿ ವಿವರಿಸಿರುವಂತೆ, ಶ್ರೀಮತಿ.ಅಹಲ್ಯ ಚಿತ್ತರಂಜನ್‌ರವರು, ಸ್ವತ್ತಿನ ಸಂಖ್ಯೆ:10 (ಹಳೆದು–315), 2ನೇ ಅಡ್ಡರಸ್ತೆ ಎನ್.ಆರ್. ಕಾಲೋನಿ, ಈ ಸ್ವತ್ತನ್ನು ಪಾಲಿಕೆಯಿಂದ 1949 ರಲ್ಲಿ ಹರಾಜು ಮುಖಾಂತರ ಪಡೆದಿದ್ದು, ಕ್ರಯಪತ್ರ ಪಡೆಯದೆ ಇರುವುದರಿಂದ, ಕ್ರಯಪತ್ರ ನೀಡಲು ಕೋರಿರುತ್ತಾರೆ.

ಈ ಸ್ವತ್ತನ್ನು ಶ್ರೀಮತಿ.ಪಾರ್ವತಮ್ಮ 1949ರಲ್ಲಿ 40x60 ಅಡಿಗಳ ಸ್ವತ್ತನ್ನು 2600/–ರೂ.ಗಳಿಗೆ ಹರಾಜಿನ ಮೂಲಕ ಪಡೆದು ಆಗ್ರಿಮೆಂಟ್ ಪತ್ರವನ್ನು ಮಾಡಿಕೊಂಡಿರುತ್ತಾರೆ. ಹಣ ಪಾವತಿಸಿದ ಬಗ್ಗೆ ದಾಖಲೆ ಇರುವುದಿಲ್ಲ. ಕ್ರಯಪತ್ರ ನೊಂದಾಯಿಸಿಕೊಂಡಿರುವುದಿಲ್ಲ. ಆದರೆ, ಆಗ್ರಿಮೆಂಟ್ ಪತ್ರದ ಆಧಾರ ಖಾತಾ ನೊಂದಾಯಿಸಿ ಕೊಂಡಿರುತ್ತಾರೆ. ಶ್ರೀಮತಿ.ಪಾರ್ವತಮ್ಮರವರು ಹಾಗೂ ಇವರ ಪತಿಯಾದ ಶ್ರೀ ನಾರಾಯಣಸ್ವಾಮಿರವರು ಮರಣ ಹೊಂದಿದ್ದು, ಇತರೇ ವಾರಸುದಾರರು ಶ್ರೀಮತಿ.ಪಾರ್ವತಮ್ಮನವರ ಮಗಳಾದ ಶ್ರೀಮತಿ.ಅಹಲ್ಯ ಚಿತ್ತರಂಜನ್‌ರವರಿಗೆ ನೊಂದಾಯಿತ ಜಿ.ಪಿ.ಎ. ಪತ್ರದ ಆಧಾರ ಅಧಿಕಾರ ನೀಡಿರುವುದರಿಂದ ಕ್ರಯಪತ್ರ ನೀಡಲು ಕೋರಿರುತ್ತಾರೆ.

ಈ ಸ್ವತ್ತಿನ ಒಟ್ಟು 40x60 ಅಡಿಗಳ ಹಿಂಭಾಗದ ಅಳತೆಯಲ್ಲಿ 16x40 ಅಡಿಗಳನ್ನು ಶ್ರೀ ವಿ.ಗುರುರಾಜ ರವರಿಗೆ ಕ್ರಯಪತ್ರದ ಮೂಲಕ ಕ್ರಯಕ್ಕೆ ನೀಡಿದ್ದು, 3ಥ44 ಅಡಿಗಳು ಓಡಾಡಲು ದಾರಿ ಬಿಟ್ಟಿದ್ದು, ಉಳಿಕೆ 44x37 ಅಡಿಗಳಿರುತ್ತದೆ. ಶ್ರೀ.ವಿ.ಗುರುರಾಜರವರಿಗೆ 16x40 ಅಡಿಗಳಿಗೆ ಖಾತಾ ನೊಂದಾಯಿಸಲಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:21–09–2011ರ ಸರ್ಕಾರದ ಮಾರ್ಗಸೂಚಿಯಂತೆ ವಸತಿ ಚದರ ಅಡಿ ಒಂದಕ್ಕೆ ರೂ.3000/–ಗಳಿದ್ದು, ಅರ್ಜಿದಾರರುಗಳು ಕೋರಿರುವ ಜಾಗವು 1628 ಚ.ಅಡಿ ಗಳಾಗುತ್ತದೆ. ಇದರಂತೆ 3000x1628 = 48,84,000/– ರೂ.ಗಳಾಗುತ್ತದೆ.

ಸದರಿ ವಿಷಯದಲ್ಲಿ ಮೂಲ ಕಡತ ಲಭ್ಯವಿಲ್ಲದೇ ಇರುವುದರಿಂದ, ಶ್ರೀಮತಿ.ಪಾರ್ವತಮ್ಮ ಮತ್ತು ಅವರ ಪತಿಯಾದ ಶ್ರೀ ನಾರಾಯಣಸ್ವಾಮಿರವರು ಮರಣ ಹೊಂದಿರುವುದರಿಂದ ಮತ್ತು ಇತರೆ ವಾರಸುದಾರರಿಂದ ನೊಂದಾಯಿತ ಜಿ.ಪಿ.ಎ. ಪತ್ರದ ಮೂಲಕ ಅಧಿಕಾರ ಪಡೆದಿರುವ ಶ್ರೀಮತಿ.ಅಹಲ್ಯ ಚಿತ್ತರಂಜನ್ ರವರಿಗೆ ಸಂಪೂರ್ಣ ವಿಸ್ತೀರ್ಣಕ್ಕೆ ನೊಂದಾವಣೆ ಇಲಾಖೆಯ ದರ ಇತ್ಯಾದಿಗಳನ್ನು ಸರ್ಕಾರಕ್ಕೆ ಸಂದಾಯ ಮಾಡಿಸಿಕೊಂಡು ನೊಂದಾಯಿಸಲು ತದನಂತರ, ಶ್ರೀ ಗುರುರಾಜ್ ಇವರಿಗೆ

ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಎಲ್ಲಾ ದರಗಳನ್ನು ಸಂದಾಯ ಮಾಡಿ ನೊಂದಾಯಿಸಿ ಕೊಡುವ ಷರತ್ತು ವಿಧಿಸಿ ಕ್ರಯಪತ್ರ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ತಾ॥. 10.01.2012ರ ಆಯುಕ್ತರ ಟಿಪ್ಪಣಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12–04–2012ರ ನಿರ್ಣಯ.

***ನಿರ್ಣಯ*** **:– ದಿನಾಂಕ :10–01–2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು, ಇದರಂತೆ ಈ ಕೆಳಕಂಡ ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ ಸೂಕ್ತ ಸ್ಪಷ್ಟೀಕರಣ ನೀಡಿ ಸಮಿತಿಯ ಮುಂದೆ ಕಡತವನ್ನು ಮರುಮಂಡಿಸಲು ಹಿಂದಿರುಗಿಸಲಾಗಿದೆ.**

01. ಸದರಿ ಸ್ವತ್ತಿನಲ್ಲಿ ಅರ್ಜಿದಾರರು ವಾಸವಿಲ್ಲದಿರುವುದು ಕಂಡು ಬಂದಿರುತ್ತದೆ.
02. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಕಡತದಲ್ಲಿ ಯಾವುದೇ ಮೂಲ ದಾಖಲೆಗಳು ಇರುವುದಿಲ್ಲ.
03. ಅರ್ಜಿದಾರರಾದ ಶ್ರೀಮತಿ ಅಹಲ್ಯ ಚಿತ್ತರಂಜನ್ ರವರು ಸದರಿ ಸ್ವತ್ತಿನ ಉತ್ತರಾಧಿಕಾರಿ ಎನ್ನುವ ಕುರಿತು ಉತ್ತರಾಧಿಕಾರ ಪತ್ರ (Succession Certificate) ವನ್ನು ಒದಗಿಸಿರುವುದಿಲ್ಲ.
04. ಮಾರಾಟ ಕರಾರು ಪತ್ರದಲ್ಲಿನ ಷರತ್ತುಗಳನ್ವಯ ನಿಗಧಿತ ಅವಧಿಯಲ್ಲಿ ಕಟ್ಟದ ನಿರ್ಮಾಣ ಮಾಡಿ ಕಟ್ಟಡದ ನಿರ್ಮಾಣ ಕಾರ್ಯವು ಮುಗಿದ ತರುವಾಯ ಕ್ರಯಪತ್ರವನ್ನು ಪಡೆದುಕೊಳ್ಳಬೇಕಾಗಿರುತ್ತದೆ. ಆದರೆ ಕ್ರಯ ಪತ್ರ ಪಡೆಯದೇ ಷರತ್ತುಗಳನ್ನು ಉಲ್ಲಂಘಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿರುವುದು ಕಂಡುಬಂದಿರುವುದಿಲ್ಲ.
05. ಕ್ರಯ ಪತ್ರವಿಲ್ಲದೇ ಶ್ರೀ ಗುರುರಾಜು ಎಂಬುವರಿಗೆ 16*40 ಅಡಿ ಜಾಗವನ್ನು ಮಾರಟ ಮಾಡಲಾಗಿರುತ್ತದೆ ಇದು ಕಾನೂನು ಬಾಹಿರವಾಗಿರುತ್ತದೆ ಹಾಗೂ ನಗರ ಪಾಲಿಕೆಯಿಂದ ಶ್ರೀ ಗುರುರಾಜುರವರಿಗೆ ಖಾತಾ ನೊಂದಾವಣೆ ಮಾಡಲಾಗಿರುತ್ತದೆ. ಸದರಿ ಖಾತೆಯನ್ನು ರದ್ದುಪಡಿಸಲು ಕೂಡಲೇ ಕ್ರಮಕೈಗೊಳ್ಳುವುದು ಹಾಗೂ ಇದಕ್ಕೆ ಸಂಬಂಧಪಟ್ಟ ಅಧಿಕಾರಿ ಮತ್ತು ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಿ ಕೈಗೊಂಡ ಕ್ರಮಗಳ ಕುರಿತು ಸಮಿತಿಗೆ ಮಾಹಿತಿ ನೀಡುವುದು.
06. ಸ್ವತ್ತಿನ ಮಾರಟ ಮಾಡುವ ಕುರಿತು ಕೌನ್ಸಿಲ್ ಸಭೆಯಲ್ಲಿ ತೆಗೆದುಕೊಳ್ಳಲಾದ ನಡವಳಿಗಳ ಪ್ರತಿಗಳನ್ನು ದೃಢಿಕರಿಸಿ ಲಗತ್ತಿಸುವುದು.

**ಮುನೀಂದ್ರ ಕುಮಾರ್.ಕೆ.ಎ**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 29–11–2012 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
| --- | --- |
| ಶ್ರೀಯುತರುಗಳಾದ : | |
| ಮುನೀಂದ್ರಕುಮಾರ್.ಕೆ.ಎ – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಸುರೇಶ್. ಹೆಚ್ – ಸದಸ್ಯರು | ಉಪ ಆಯುಕ್ತರು (ಆಸ್ತಿಗಳು), |
| ಮುನಿಸ್ವಾಮಿಗೌಡ – ಸದಸ್ಯರು | ಸಹಾಯಕ ಕಾನೂನು ಅಧಿಕಾರಿ, |
| ಆನಂದ್. ವಿ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಟಿ.ಇ.ಸಿ), |
| ಕೆ. ಉಮೇಶ್‌ಶೆಟ್ಟಿ – ಸದಸ್ಯರು | --- |
| ಕೆ. ಪೂರ್ಣಿಮ – ಸದಸ್ಯರು | --- |
| ಗಂಗಾಂಬಿಕೆ – ಸದಸ್ಯರು | --- |
| ಕ್ವೀನ್‌ಎಲಿಜ಼ೆಬತ್ – ಸದಸ್ಯರು | --- |
| ಟಿ.ಎ. ಗಾಯಿತ್ರಿ – ಸದಸ್ಯರು | --- |
| ಗೈರು ಹಾಜರಿದ್ದ ಸದಸ್ಯರುಗಳು | --- |
| ತೇಜಸ್ವಿನಿ ಎನ್.ರಾಜು – ಸದಸ್ಯರು | --- |
| ನೂರ್ ಜಹಾನ್ – ಸದಸ್ಯರು | --- |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/127/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಸ.ಆ(ಆಸ್ತಿ)ಜೆ.ಎಲ್.ಸಿ/ಪಿಆರ್/21/12–13, ದಿನಾಂಕ : 03.10.2012 ರಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯ ಎಲ್ಲಾ 8 ವಲಯಗಳಲ್ಲಿ ಉತ್ಪಾದನೆಯಾಗುವ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ, ವಿಲೇವಾರಿ ಮತ್ತು ಸಂಸ್ಕರಣಾ ಘಟಕಗಳನ್ನು ಸ್ಥಾಪನೆ ಮಾಡಲು ನಗರದ ಹೊರ ವಲಯದಲ್ಲಿ ಸರ್ಕಾರಿ ಜಾಗದ ಅವಶ್ಯಕತೆ ಇದ್ದು, ಅದರಲ್ಲಿ ಬಿಎಂಟಿಸಿ ಸಂಸ್ಥೆಯವರಿಗೆ ಸೇರಿದ ನಗರದ ಹೊರ ವಲಯದ ವಿವಿಧ ಪ್ರದೇಶಗಳಲ್ಲಿರುವ 12 ಜಮೀನುಗಳನ್ನು ಪಾಲಿಕೆಗೆ ಹಸ್ತಾಂತರಿಸಲು ಹಾಗೂ ಬಿಎಂಟಿಸಿ ಸಂಸ್ಥೆಗೆ ಪಾಲಿಕೆಯ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿರುವ 5 ಆಸ್ತಿಗಳನ್ನು ಬಿಎಂಟಿಸಿ ಸಂಸ್ಥೆಗೆ ನೀಡಲು ಕೋರಿ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ರವರ ಪತ್ರ ಸಂಖ್ಯೆ: ಬೆಂಮಸಾಸಂ/ ಕೇಕ/ವಾಣಿಜ್ಯ/ಆಸ್ತಿ/51ಬಿ/2531/2012–13, ದಿನಾಂಕ:28–08–2012ರಲ್ಲಿ ಪತ್ರ ಬರೆದಿರುತ್ತಾರೆ ಹಾಗೂ ಈ ಎಲ್ಲಾ ಆಸ್ತಿಗಳ ಪ್ರಸ್ತುತ ಸರ್ಕಾರದ ಮಾರ್ಗಸೂಚಿ ದರಗಳನ್ನು ಲೆಕ್ಕಚಾರ ಮಾಡಿದ್ದು, ಮಂಡಳಿ ಸಭೆ ಹಾಗೂ ಸರ್ಕಾರದ ತೀರ್ಮಾನವನ್ನು ಕಾಯ್ದಿರಿಸಿ ತಾತ್ವಿಕವಾಗಿ ಒಪ್ಪಿರುವ ಅಂಶವನ್ನು ಸಹಾ ಪತ್ರದಲ್ಲಿ ವಿಶ್ಲೇಷಿಸಿರುತ್ತಾರೆ.

ಇದರಂತೆ ಬಿಎಂಟಿಸಿ ಸಂಸ್ಥೆಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲು ಉದ್ದೇಶಿಸಿರುವ ನಿವೇಶನಗಳು ಈ ಕೆಳಕಂಡಂತೆ ಇವೆ.

| Sl No | Taluk | Hobil | Place | Survey No | Extent (A-G) | Cost of the land as per Present Guidance Value |
| --- | --- | --- | --- | --- | --- | --- |
| 1 | 2 | 3 | 4 | 5 | 6 | 7 |
| 1 | East | Bidarahalli | Kada Agrahara | 34 | 18-04 | 3,62,00,000 |
| 2 | East | Bidarahalli | Kannur | 50 | 50-00 | 17,50,00,000 |
| 3 | East | Bidarahalli | Mittaganahalli | 2 | 10-00 | 2,50,00,000 |
| 4 | East | Bidarahalli | Doddenahalli | 10 | 14-09 | 4,26,75,000 |
| 5 | South | Uttarahalli | Sunkadakatte | 37 | 15-00 | 4,50,00,000 |

| | | | | | | |
|---|---|---|---|---|---|---|
| 6 | South | Tavarekere | Sulivara | 60 | 10-00 | 5,00,00,000 |
| 7 | South | Tavarekere | Yelachaguppe | 93 | 10-00 | 3,00,00,000, |
| 8 | North | Yeshwanthpura | Saneguravanahalli | 120 | 03-00 | 28,74,96,000 |
| 9 | North(A) | Jala | Chagalahatti | 102 | 10-00 | 4,00,00,000 |
| 10 | North(A) | Jala | Bagalur | 271 | 13-00 | 7,80,00,000 |
| 11 | Anekal | Anekal Kasaba | Indlawadi | 143 | 11-00 | 2,20,00,000 |
| 12 | Anekal | Jigani | Kallubalu | 90 | 60-37 | 24,37,00,000 |
| | | | Total 50% of the PGV | | 225-10 | 107,50,71,000 |
| | | | | | | **53,75,35,500** |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವಾಧೀನದಲ್ಲಿರುವ ಈ ಕೆಳಕಂಡ ಆಸ್ತಿಗಳನ್ನು ಬಿಎಂಟಿಸಿ ಸಂಸ್ಥೆಯವರ ಅವಶ್ಯಕತೆಗೆ ಬೇಕೆಂದು ಬೇಡಿಕೆ ಸಲ್ಲಿಸಿರುತ್ತಾರೆ. ಇವುಗಳಲ್ಲಿ ಕಲಾಸಿಪಾಳ್ಯ ಬಸ್ ನಿಲ್ದಾಣದ ನಿವೇಶನವನ್ನು ಪಾಲಿಕೆಯು ಈಗಾಗಲೇ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಭೌತಿಕವಾಗಿ ಹಸ್ತಾಂತರಿಸಿದ್ದು, ಉಳಿದಂತಹ ಆಸ್ತಿಗಳ ಮಾಹಿತಿ ಈ ಕೆಳಕಂಡಂತೆ ಇರುತ್ತವೆ.

| Sl No | Taluk | Hobil | Place | Survey No | Extent (A-G) | Cost of the land as per Present Guidance Value |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | | | Kalasiplayam | - | 4-13 | 83,27,04,100 |
| 2 | North | Yeshwanthpur | Kamalanagar (Shankaranag Bus Station) | 46 | 0-30 | 1,50,00,000 |
| 3 | East | K.R.Puram | K.R.Puram Old Market Yard | 48 | 2-00 | 3,20,00,000 |
| 4 | South | Begur | Bilekahalli | 154/1 | 2-32 | 8,40,00,000 |
| 5 | East | K.R.Puram | Hoodi | 29 & 30 | 5-00 | 15,00,00,000 |
| | | | Total 50% of the PGV | | 14-35 | 111,37,04,100 |
| | | | | | | **55,68,52,050** |

ಮಹಾನಗರ ಸಾರಿಗೆ ಸಂಸ್ಥೆಯವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪರಸ್ಪರ ಹಸ್ತಾಂತರಿಸಲು ಒಪ್ಪಿರುವ 12 ಸ್ಥಳಗಳ ಬಗ್ಗೆ ವಿಶೇಷ ಆಯುಕ್ತರು (ಯೋಜನೆ), ಜಂಟಿ ಆಯುಕ್ತರು (ಆಸ್ತಿಗಳು) ಹಾಗೂ ಪರಿಸರ ಕೋಶದ ಅಧಿಕಾರಿಗಳು ಪರಿಶೀಲನೆಯನ್ನು ನಡೆಸಿ ಬಿಎಂಟಿಸಿ ಸಂಸ್ಥೆಯವರು ನೀಡುವ 12 ಸ್ಥಳಗಳ ಪೈಕಿ ತಾವರೆಕೆರೆ ಹೋಬಳಿಯ ಸೂಲಿವಾರ ವ್ಯಾಪ್ತಿಯ ಸರ್ವೆ ನಂ:60 ರಲ್ಲಿರುವ 10–00 ಎಕರೆ ಜಮೀನು ಘನ ತ್ಯಾಜ್ಯ ವಸ್ತು ವಿಲೇವಾರಿ ಉದ್ದೇಶಕ್ಕೆ ಸೂಕ್ತವಾಗಿರುವುದಿಲ್ಲ ಅಂದರೆ ಕಲ್ಲುಬಂಡೆಗಳಿಂದ ಕೂಡಿರುವ ಪ್ರದೇಶವಾಗಿರುವ ಕಾರಣ ಇದರ ಬದಲಾಗಿ ಮಂಡೂರು ಗ್ರಾಮದ ಬಳಿ ಇರುವ ಬಿದರಹಳ್ಳಿ ಹೋಬಳಿ, ಬೈಯಪ್ಪನಹಳ್ಳಿ ಸರ್ವೆ ನಂ:44, ವ್ಯಾಪ್ತಿಯ 03–10 ಎಕರೆ ಜಮೀನನ್ನು ಹಸ್ತಾಂತರಿಸಲು ಕೋರಲಾದ ಮೇರೆಗೆ ಬಿಎಂಟಿಸಿ ಸಂಸ್ಥೆಯವರು ಸದರಿ ಜಮೀನನ್ನು ಪಾಲಿಕೆಗೆ ನೀಡಲು ಸಹಾ ಒಪ್ಪಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಆಸ್ತಿಗಳ ವಿಲೇವಾರಿ ಬಗ್ಗೆ ಪ್ರಸ್ತುತ 2011–12ರ ಸರ್ಕಾರದ ಮಾರ್ಗಸೂಚಿ ದರಗಳನ್ನು ಲೆಕ್ಕಾಚಾರ ಮಾಡಿ ನಮೂದಿಸಿರುವಂತೆ ಬಿಎಂಟಿಸಿ ಸಂಸ್ಥೆಗೆ ಸಂಬಂಧಪಟ್ಟ 12 ಆಸ್ತಿಗಳ ಒಟ್ಟು ಮೌಲ್ಯ ರೂ.107,50,71,000/– ಗಳೆಂದು ಪಾಲಿಕೆಯ ಸ್ವಾಧೀನದಲ್ಲಿರುವ 5 ಆಸ್ತಿಗಳ ಒಟ್ಟು ಮೌಲ್ಯ ರೂ.111,37,04,100/– ಗಳೆಂದು ದಾಖಲಿಸಿದ್ದು, ಸರ್ಕಾರದ ಆದೇಶ ಸಂಖ್ಯೆ : ನಅಇ 129

ಟಿಎಂಡಿ 2002, ದಿನಾಂಕ : 02–06–2003ರ ಕ್ರಮ ಸಂಖ್ಯೆ : (iii) (E) ರಲ್ಲಿ ನೀಡಿರುವ ಮಂಜೂರಾತಿಯಂತೆ ಮೇಲ್ಕಂಡ ದರಗಳಲ್ಲಿ ಒಟ್ಟು ಶೇ 50% ದರವನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ರಿಯಾಯಿತಿ

ದರವನ್ನು ನೀಡಬಹುದಾಗಿರುವ ಅಂಶವನ್ನು ಸಹ ಪ್ರಸ್ತಾಪಿಸಿರುತ್ತಾರೆ. ಅದರಂತೆ ಬಿಎಂಟಿಸಿಸಂಸ್ಥೆಯವರ 12 ಆಸ್ತಿಗಳ ಒಟ್ಟು ಮೌಲ್ಯ ರೂ.53,75,35,500/–ಗಳು ಪಾಲಿಕೆಯ 5 ಆಸ್ತಿಗಳ ಒಟ್ಟು ಮೌಲ್ಯ ರೂ.55,68,52,050/–ಗಳು ಲೆಕ್ಕಚಾರ ಮಾಡಿರುತ್ತಾರೆ.

ಬಿಎಂಟಿಸಿ ಸಂಸ್ಥೆಯಿಂದ ಈಗಾಗಲೇ ಸಿದ್ಧಪಡಿಸಿ ಕಳುಹಿಸಿರುವ 12 ಆಸ್ತಿಗಳ ಪಟ್ಟಿಯಲ್ಲಿ ಕ್ರಮ ಸಂಖ್ಯೆ:6ರ ತಾವರೆಕೆರೆ ಹೋಬಳಿ, ಸೂಲಿವಾರ ಗ್ರಾಮದ ಸರ್ವೆ ನಂ:60ರ ಆಸ್ತಿಯ ವಿಸ್ತೀರ್ಣ 10–00 ಎಕರೆ ಮಾರ್ಗಸೂಚಿ ದರ ರೂ.5 ಕೋಟಿ ಇದರ ಬದಲಿಗೆ ಬಿದರಹಳ್ಳಿ ಹೋಬಳಿ, ಬೈಯಪ್ಪನಹಳ್ಳಿ ಸರ್ವೆ ನಂ:44ರ ಜಮೀನಿನ ವಿಸ್ತೀರ್ಣ 03–10 ಎಕರೆ ಪ್ರದೇಶದ ಮಾರ್ಗಸೂಚಿ ಬೆಲೆ ರೂ.97,50,000/–ಗಳನ್ನು ಸೇರ್ಪಡೆ ಮಾಡಬೇಕಾಗಿರುತ್ತದೆ. ಇದರಂತೆ ಈ ಆಸ್ತಿಗಳನ್ನು ಪಾಲಿಕೆಯ ವ್ಯಾಪ್ತಿಯ ತ್ಯಾಜ್ಯ ವಸ್ತುಗಳ ನಿರ್ವಹಣೆ, ವಿಲೇವಾರಿ ಮತ್ತು ಸಂಸ್ಕರಣಾ ಘಟಕಗಳಿಗೆ ಉಪಯೋಗಿಸಬಹುದಾಗಿರುತ್ತದೆ. ಇದರಂತೆ:–

| Sl No | Taluk | Hobil | Place | Survey No | Extent (A-G) | Cost of the land as per Present Guidance Value |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | East | Bidarahalli | Kada Agrahara | 34 | 18-04 | 3,62,00,000 |
| 2 | East | Bidarahalli | Kannur | 50 | 50-00 | 17,50,00,000 |
| 3 | East | Bidarahalli | Mittaganahalli | 2 | 10-00 | 2,50,00,000 |
| 4 | East | Bidarahalli | Doddenahalli | 10 | 14-09 | 4,26,75,000 |
| 5 | South | Uttarahalli | Sunkadakatte | 37 | 15-00 | 4,50,00,000 |
| 6 | East | Bidarahalli | Bayapanahalli | 44 | 03-10 | 97,50,000 |
| 7 | South | Tavarekere | Yelachaguppe | 93 | 10-00 | 3,00,00,000, |
| 8 | North | Yeshwanthpura | Saneguravanahalli | 120 | 03-00 | 28,74,96,000 |
| 9 | North(A) | Jala | Chagalahatti | 102 | 10-00 | 4,00,00,000 |
| 10 | North(A) | Jala | Bagalur | 271 | 13-00 | 7,80,00,000 |
| 11 | Anekal | Anekal Kasaba | Indlawadi | 143 | 11-00 | 2,20,00,000 |
| 12 | Anekal | Jigani | Kallubalu | 90 | 60-37 | 24,37,00,000 |
| | | | Total 50% of the PGV | | 218-20 | 103,48,21,000 |
| | | | | | | **51,74,10,500** |

ಪಾಲಿಕೆಯ 5 ಆಸ್ತಿಗಳ ಒಟ್ಟು ವಿಸ್ತೀರ್ಣ 14–35 ಎಕರೆಗಳು ಈ ಆಸ್ತಿಗಳ ಮಾರ್ಗಸೂಚಿ ದರ ರೂ.55,68,52,050/–ಗಳಾಗಲಿದ್ದು, ಈ ಜಮೀನನ್ನು ವ್ಯವಸ್ಥಾಪಕ ನಿರ್ದೇಶಕರು, ಬಿಎಂಟಿಸಿ ಸಂಸ್ಥೆಯವರಿಗೆ ಹಸ್ತಾಂತರ ಮಾಡಬೇಕಾಗಿರುತ್ತದೆ. ಇದೇ ರೀತಿ ಬಿಎಂಟಿಸಿ ಸಂಸ್ಥೆಯ 12 ಆಸ್ತಿಗಳ ಒಟ್ಟು ವಿಸ್ತೀರ್ಣ 218–20 ಎಕರೆಗಳು ಈ ಆಸ್ತಿಗಳ ಮಾರ್ಗಸೂಚಿ ದರ ರೂ.51,74,10,500/–ಗಳಾಗಲಿದ್ದು, ಈ ಜಮೀನನ್ನು ಬಿಎಂಟಿಸಿ ಸಂಸ್ಥೆಯಿಂದ ಪಾಲಿಕೆಗೆ ಪಡೆಯಬೇಕಾಗಿರುತ್ತದೆ. ಈ ಆಸ್ತಿಗಳ ಮೌಲ್ಯದಲ್ಲಿ ಹೆಚ್ಚುವರಿಯಾಗಲಿರುವ ರೂ.3,94,41,550/– ಮೊತ್ತವನ್ನು ವ್ಯವಸ್ಥಾಪಕ ನಿರ್ದೇಶಕರು ಬಿಎಂಟಿಸಿ ಸಂಸ್ಥೆಯವರಿಂದ ಪಾಲಿಕೆಗೆ ಪಡೆಯಬೇಕಾಗಿರುತ್ತದೆ. ಒಟ್ಟಾರೆ ಈ ಆಸ್ತಿಗಳನ್ನು ಎರಡು ಸಂಸ್ಥೆಗಳು ಪರಸ್ಪರ ಹಸ್ತಾಂತರಿಸಲು ಮತ್ತು ಪಡೆಯಲು ಒಮ್ಮತದಿಂದ ಸಮ್ಮತಿಸಿರುವುದರಿಂದ ಈ ಪ್ರಸ್ತಾವನೆಯನ್ನು ಪಾಲಿಕೆಯ ಸಮಿತಿಗಳ ಮುಂದೆ ಮಂಡಿಸಿ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಲಿಕೆ ಸಭೆಯ ಮುಂದೆ ಸೂಕ್ತ ತೀರ್ಮಾನ ಕೋರಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿ: 03–10–2012 ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06–11–2012ರ ನಿರ್ಣಯ.

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ: 06–11–2012ರ ಸಭೆಯ ನಡವಳಿಗಳನ್ನು ಒಪ್ಪಲಾಯಿತು.**

## *ವಿಷಯದ ಸಂಖ್ಯೆ :-ತೆಆಸ್ಥಾಸ/128/2012-13*

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಕಾಪಾಅ (ಟಿಇಸಿ)/ಪಿಆರ್/99/12-13, ದಿನಾಂಕ : 08.06.2012 ರಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದಲ್ಲಿ ವಿವಿಧ ರಸ್ತೆಗಳು ವಾಹನ ದಟ್ಟಣೆಯಿಂದ ಕೂಡಿದ್ದು, ಇಂತಹ ರಸ್ತೆಗಳಲ್ಲಿ ಹಾಗೂ ಕೂಡು ರಸ್ತೆಗಳಲ್ಲಿ ಪಾದಚಾರಿಗಳೂ ಸುರಕ್ಷಿತವಾಗಿ ರಸ್ತೆ ದಾಟಲು ಪಾದಚಾರಿ ಮೇಲುಸೇತುವೆ ನಿರ್ಮಿಸುವುದು ಅವಶ್ಯಕವಾಗಿರುತ್ತದೆ. ಈ ಸಂಬಂಧ ಮಾನ್ಯ ಶಾಸಕರು/ಪಾಲಿಕೆಯ ಸದಸ್ಯರು ಸೂಚಿಸುವ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ಕ್ರಮ ವಹಿಸುವಂತೆ ಪಾಲಿಕೆ ಸಭೆಯ ವಿಷಯ ಸಂಖ್ಯೆ: 13 (208)/10-11 ರಲ್ಲಿ ದಿನಾಂಕ: 01-02-2011 ರಂದು ಅನುಮೋದನೆಯಾಗಿರುತ್ತದೆ.

ನಗರದ ವಿವಿಧ ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸುವ ಸಾಧ್ಯ ಸಾಧ್ಯತೆಗಳನ್ನು ಅಧ್ಯಯನ ಮಾಡಿ Feasibility Report ನ್ನು ತಯಾರಿಸಲು ಯೋಜನಾ ಸಮಾಲೋಚಕರಾದ ಮೇ॥ ಎನ್‌ಫ್ರಸ್‌ಪೋರ್ಟ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ರವರವನ್ನು ನೇಮಿಸಿಕೊಂಡು ಈ ಕೆಳಕಂಡ 14 ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸಲು ವರದಿ ಪಡೆಯಲಾಗಿರುತ್ತದೆ.

1. ಗಾಂಧಿ ಬಜಾರ್ ಮುಖ್ಯ ರಸ್ತೆ, ಡಿ.ವಿ.ಜಿ ರಸ್ತೆ ಜಂಕ್ಷನ್ ಹತ್ತಿರ
2. ಹಳೆ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ ಹತ್ತಿರ
3. ಮಿಲ್ಲರ್ ರಸ್ತೆ ಭಗವಾನ್ ಮಹಾವೀರ್ ಆಸ್ಪತ್ರೆ ಹತ್ತಿರ
4. ಮಡಿವಾಳ ವಾಣಿಜ್ಯ ಸಂಕೀರ್ಣ ಹತ್ತಿರ, ಹೋಸೂರು ರಸ್ತೆ
5. ಹೊರವರ್ತುಲ ರಸ್ತೆ, ಹೊಸಕೆರೆ ಹಳ್ಳಿ ಲಿಟಲ್ ಫ್ಲವರ್ ಶಾಲೆ ಹತ್ತಿರ
6. ಸಂಪಿಗೆ ರಸ್ತೆ, ಮಂತ್ರಿ ಮಾಲ್ ಹತ್ತಿರ
7. ಕ್ರೈಸ್ಟ್ ಕಾಲೇಜ್ ಹತ್ತಿರ, ಮರೀಗೌಡ ರಸ್ತೆ
8. ಎನ್.ಆರ್.ಕಾಲೋನಿ ಬಸ್ ನಿಲ್ದಾಣ ಹತ್ತಿರ
9. ಪ್ಯಾಲೇಸ್ ಗುಟ್ಟಹಳ್ಳಿ ಬಸ್ ನಿಲ್ದಾಣ ಹತ್ತಿರ, ಬಳ್ಳಾರಿ ರಸ್ತೆ
10. ಎಸ್.ಜೆ.ಇ.ಎಸ್. ಕಾಲೇಜ್ ಎದುರು, ಕೆ.ಆರ್.ಪುರಂ
11. ಅಂಬಲಿಪುರ ಗೇಟ್ ಹತ್ತಿರ, ಸರ್ಜಾಪುರ ರಸ್ತೆ
12. ಮಯೂರ ಬೇಕರಿ ಹತ್ತಿರ, ವೈಟ್ ಫೀಲ್ಡ್
13. ಎನ್.ಇ.ಎಸ್ ಜಂಕ್ಷನ್ ಹತ್ತಿರ ಯಲಹಂಕ, ದೊಡ್ಡಬಳ್ಳಾಪುರ
14. ಎಂಬೆಸಿ ಗಾಲ್ಫ್ ಲಿಂಕ್ ಹತ್ತಿರ, ದೊಮ್ಮಲೂರು.

ಮೇಲೆ ತಿಳಿಸಿದ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಯನ್ನು DBOOT ಆಧಾರದ ಮೇಲೆ ನಿರ್ಮಿಸಲು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ದಿನಾಂಕ: 18-02-2012 ರಂದು ಕರೆಯಲಾಗಿರುತ್ತದೆ.

ಈ ಟೆಂಡರ್ ಪ್ರಕ್ರಿಯೆಯಲ್ಲಿ ಎಂ.ಎಚ್.ಮರಿಗೌಡ್‌ರಸ್ತೆ ಕ್ರೈಸ್ ಕಾಲೇಜ್ ಹತ್ತಿರ ಉದ್ದೇಶೀಸಿರುವ ಯೋಜನೆಗೆ ಎರಡು ಏಜೆನ್ಸಿಗಳಾದ (1) ಮೇ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ಮತ್ತು (2) ಮೇ॥ ಪ್ರಕಾಶ್ ಆರ್ಟ್ಸ್ ರವರುಗಳು ಭಾಗವಹಿಸಿದ್ದು, ಇಬ್ಬರು ಸಹ ತಾಂತ್ರಿಕ ಅರ್ಹತೆ ಹೊಂದಿರುತ್ತಾರೆ. ಇವರುಗಳು ನಮೂದಿಸಿರುವ ಆರ್ಥಿಕ ಬಿಡ್ ಕೆಳಕಂಡಂತೆ ಇರುತ್ತದೆ.

| ಕ್ರಮ. ಸಂಖ್ಯೆ | ಏಜೆನ್ಸಿಗಳ ಹೆಸರು | ಪಾಲಿಕೆಗೆ ನೀಡಲು ಒಪ್ಪಿರುವ ವಾರ್ಷಿಕ್ ಲೈಸನ್ಸ್ ಫೀ (ತೆರಿಗೆ ಸೇರಿ) | ಷರಾ |
|---|---|---|---|
| 1 | ಮೇ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ | 9,73,000/- | H1 |
| 2 | ಮೇ॥ ಪ್ರಕಾಶ್ ಆರ್ಟ್ಸ್ | 7,20,000/ | H2 |

ಮೇಲ್ಕಾಣಿಸಿದ ಇಬ್ಬರು ಸಂಸ್ಥೆಯವರ ಪೈಕಿ ಮೇ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರು ಅತಿ ಹೆಚ್ಚು ಲೈಸನ್ಸ್ ಫೀ ನಮೂದಿಸಿದ ಗುತ್ತಿಗೆದಾರರಾಗಿದ್ದು, ಇವರು ನಮೂದಿಸಿದ ಮೊತ್ತವು ಪ್ರತಿ ವರ್ಷಕ್ಕೆ ರೂ. 9,73,000/- ಗಳಾಗಿದ್ದು, ಈ ಮೊತ್ತವು ಆರ್.ಎಫ್.ಪಿ ಡಾಕ್ಯುಮೆಂಟ್‌ನಲ್ಲಿ ನಿಗಧಿಪಡಿಸಿರುವ ಕನಿಷ್ಠ ಲೈಸನ್ಸ್ ಫೀ ಮೊತ್ತವಾದ ರೂ. 5,00,000/- ಗಳಿಗಿಂತ ಹೆಚ್ಚಾಗಿರುತ್ತದೆ ಹಾಗೂ ಸಮಂಜಸವಾಗಿರುತ್ತದೆ.

ಸದರಿ ಯೋಜನೆಯನ್ನು ಪಿ.ಪಿ.ಪಿ ಮಾದರಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿದ್ದು ಪಾಲಿಕೆಯ ವತಿಯಿಂದ ಯಾವುದೇ ಆರ್ಥಿಕ ಹೊಣೆ ಇರುವುದಿಲ್ಲ ಸಾರ್ವಜನಿಕರು ರಸ್ತೆಯನ್ನು ಸುರಕ್ಷಿತವಾಗಿ ದಾಟಲು ಈ ಸ್ಕೈವಾಕ್ ಅನ್ನು ಉಪಯೋಗಿಸಬಹುದಾಗಿದ್ದು, ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿರವರು ಈ ಸ್ಕೈವಾಕ್ ಅನ್ನು ತಮ್ಮ ವೆಚ್ಚದಲ್ಲಿಯೇ ನಿರ್ಮಿಸಿ 20 ವರ್ಷಗಳ ಅವಧಿಗೆ ನಿರ್ವಹಣೆ ಮಾಡುತ್ತಾರೆ ಹಾಗೂ ಪಾಲಿಕೆಯ ಈ ಸ್ಕೈವಾಕ್‌ನಲ್ಲಿ ಜಾಹೀರಾತು ಹಕ್ಕನ್ನು ಸದರಿ ಸಂಸ್ಥೆಗೆ ನೀಡಬೇಕಾಗುತ್ತದೆ.

ಈ ಮೇರೆಗೆ ಸದರಿ ಟೆಂಡರ್‌ನಲ್ಲಿ ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿಯವರಾದ ಮೇ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರ ಬಿಡ್‌ನ್ನು ಪರಿಗಣಿಸಬಹುದಾಗಿದೆ.

ಆದುದರಿಂದ ಕ್ರೈಸ್ಟ್ ಕಾಲೇಜ್ ಹತ್ತಿರ DBOOT ಆಧಾರದ ಮೇಲೆ ಸ್ಕೈವಾಕ್ ನಿರ್ಮಿಸಿ ಜಾಹೀರಾತು ಹಕ್ಕನ್ನು ನೀಡಿ 20ವರ್ಷಗಳ ಕಾಲಾವಧಿ ನಿರ್ವಹಣೆಯನ್ನು ಮಾಡುವ ಷರತ್ತಿಗೆ ಒಳಪಟ್ಟು ಮೇ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರ ಟೆಂಡರ್‌ನ್ನು ಅನುಮೋದಿಸಲು ಕೋರಿ ಸಲ್ಲಿಸಿರುವ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ, ನಗರ (ಯೋಜನೆ) ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ತಾ॥ 08.06.2012ರ ಅಪರ ಆಯುಕ್ತರು (ಯೋಜನೆ) ಇವರ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ : 21.06.2012ರ ನಿರ್ಣಯ ಹಾಗೂ ಮಾನ್ಯ ಆಯುಕ್ತರ ದಿನಾಂಕ: 08-06-2012ರ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 21-06-2012 ನಿರ್ಣಯವನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06.11.2012ರ ನಿರ್ಣಯ.

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ: 06-11-2012ರ ಸಭೆಯ ನಡವಳಿಗಳನ್ನು ಒಪ್ಪಲಾಯಿತು.**

**ಮುನೀಂದ್ರ ಕುಮಾರ್.ಕೆ.ಎ**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**